ಅತಿಕಾಯ ಕಾಳಗ

(ಅರ್ಥ ಸಹಿತ)



ಬೆಲೆ 00—85

ಶ್ರೀ

ಯಕ್ಷಗಾನ

ಅತಿಕಾಯ ಕಾಳಗ

(ಅರ್ಥ ಸಹಿತ)

ಅರ್ಥ ಬರೆದವರು
(ಸುಪ್ರಸಿದ್ಧ ಯಕ್ಷಗಾನ ಕಲಾವಿದ)
ಶ್ರೀ ವೀರಭದ್ರ ನ್ಯಾಕ್,
ಬ್ರಹ್ಮಾವರ – ದ. ಕ.

ಪ್ರಕಾಶಕ:
ಡಿ. ವಿ. ಹೊಳ್ಳ, ವಿದ್ವಾನ್.
P. O. ತೆಕ್ಕಟ್ಟೆ (S. K.)

ಬೆಲೆ 00—85

ಪ್ರಥಮ ಮುದ್ರಣ

ಅಕ್ಟೋಬರ 1970

ಲೇಖಕ:

ಶ್ರೀ ವೀರಭದ್ರ ನ್ಯಾಕ್,

ಬ್ರಹ್ಮಾವರ, ದ. ಕ.

ಪ್ರಕಾಶಕ:

ಡಿ. ವಿ. ಹೊಳ್ಳ, ವಿದ್ವಾನ್,

ಕುಂದಾಪುರ.

ಮುಖಚಿತ್ರ:

ವೀರಭದ್ರ ನ್ಯಾಕರ ಅತಿಕಾಯನ ಪಾತ್ರ.

ಬೆಲೆ 00—85

ಮುದ್ರಕರು:

ದಿನೇಶ್ ಪ್ರಿಂಟರ್ಸ್,

ಬ್ರಹ್ಮಾವರ.

|| ಶ್ರೀ ||



ಯಕ್ಷಗಾನ

ಅತಿಕಾಯ ಕಾಳಗ

(ಅರ್ಥ ಸಹಿತ)

❋

॥ ಭಾಮಿನಿ ॥

ಸಿರಿ ಸರಸ್ವತಿಯರಿಗೆರಗಿ ಪಂ । ಕರುಹ ಭವನನು ನುತಿಸಿ, ರಾಮನ । ಪರಮ ಭಕ್ತನೆನಿಪ್ಪ ಪವನಾತ್ಮಜನ ಬಲಗೊಂಡು ॥ ಸುರಪ ಮುಖ್ಯಾಮರರ ವಂದಿಸಿ । ಧರೆಯೊಳುಳ್ಳ ಸಮಸ್ತ ಕವಿಗಳ । ಕರುಣವನು ಕೈಗೊಂಡು ಪೇಳುವೆನೀ ಕಥಾಮೃತವ ॥೧॥

ರಾಗ – ಭೈರವಿ | ತಾಳ – ಝಂಪೆ

ಕಾಮಿನೀ ಮಣಿ ಕೇಳು । ರಾಮ ಚರಿತವನು ಬಳಿ । ಕಾ ಮಹಾ ಕಪಿಗಳು । ದ್ದಾಮ ಸಾಹಸವ ॥೧॥

ಶ್ರೀರಾಮಃ– ತಮ್ಮ ಲಕ್ಷ್ಮಣನೆ! ಭೂಜಾತೆಯಾದ ಸೀತಾ ಸಂಬಂಧವಾದ ಕಲಹ ಕಾರ್ಯಗಳು ದಿನೇ ದಿನೇ ವೃದ್ಧಿಯಾಗುತ್ತಾ ಬಂತಲ್ಲವೇ! ಹಾಗೆ ಈ ದಿನದ ಸಂಗ್ರಾಮಕ್ಕಾಗಿ ಬಂದ ರಾಕ್ಷಸಾಧಮರ ಪರಾಕ್ರಮವನ್ನು ಏನೆಂದು ವರ್ಣಿಸಲಿ! ಕಾಲಭೈರವನಂತೆ ರಣಭಯಂಕರರು, ದೇವಾದಿ ದೇವತೆಗಳನ್ನಾದರೂ ದೆಸೆಗೆಡಿಸುವಷ್ಟು ಸಮರ್ಥರು; ಆದರೂ ನಮ್ಮ

ವಾನರೇಶ್ವರರು ಕಲ್ಲು ಗುಂಡುಗಳನ್ನೂ ಗುಡ್ಡ ಬೆಟ್ಟಗಳನ್ನೂ ಹೊತ್ತುಕೊಂಡು ರಣೋತ್ಸಾಹದಿಂದ ಹೋರಾಡಿದ ರೀತಿಯು ಅವರ್ಣನೀಯವೇ ಸರಿ. ಅದರಲ್ಲೂ ವಾಲಿಪುತ್ರ ಅಂಗದನ ಸಾಹಸಕ್ಕೆ ಎಣೆಯೇ ಇಲ್ಲ. ಏಕೆಂದರೆ ತಾನೇ ಮುಂದುವರಿದು ದೊಡ್ಡ ಪ್ರಾಸಾಯುಧ ಧಾರಿಯಾದ ನರಾಂತಕನ ಕುದುರೆಯನ್ನು ಕೆಡಹಾಕಿ, ಆತನ ಮುಷ್ಟಿ ಪ್ರಹಾರವನ್ನೂ ಸಹಿಸಿಕೊಂಡು ಹೊಡೆದಿಕ್ಕಿರುವನು. ತತ್‌ಕ್ಷಣವೇ ಪ್ರತಿಭಟಿಸಿ ನಿಂತಿರುವ ದೇವಾಂತಕ, ತ್ರಿಶಿರ, ಮಹೋದರ, ಯುದ್ಧೋನ್ಮತ್ತರನ್ನು, ನೀಲ, ಹನುಮ, ಋಷಭಾದಿಗಳು ಸಂಹರಿಸಿದ ಯುದ್ಧಕ್ರಮಗಳೆಲ್ಲಾ ಶ್ಲಾಘನೀಯವೇ ಇದೆ. ಈ ಸಾಹಸಾತಿಶಯಕ್ಕೆ ದೇವತೆಗಳೇ ಮೆಚ್ಚಬೇಕು. ಒಟ್ಟಾರೆ ಇಂದಿನ ಯುದ್ಧದಿಂದುಂಟಾದ ಕೀರ್ತಿಗೂ, ವಿಜಯಕ್ಕೂ ವಾನರೇಂದ್ರರ ಪರಾಕ್ರಮವೇ ಕಾರಣ.

ಲಕ್ಷ್ಮಣ:– ಅಣ್ಣ! ನಮ್ಮ ಕಾರ್ಯಕ್ಕೆ ಸಕಲವಿಧದಿಂದಲೂ ನೆರವಾಗಿ ಬಂದಿರುವ ಸುಗ್ರೀವಾದಿ ಕಪಿ ನಾಯಕರ ಕುರಿತು ಏನೆಂದು ಯೋಚಿಸಿದೆ?

ಕಂಡು ತೋಷವನು ಕೈ । ಕೊಂಡು ಮತ್ತವರ ನುರೆ । ಕೊಂಡಾಡಿದನು ಪ್ರಬಲ । ಪಿಂಡರಿವರೆಂದು ॥೨॥

ರಾಮ:– ಈ ಲೋಕದಲ್ಲಿ ಸರಿಯಾದ ಪ್ರತಿಫಲವಿತ್ತರೂ ಸ್ವಾಮಿ ಕಾರ್ಯಕ್ಕಾಗಿ ಹೋರಾಡುವವರೇ ವಿರಳ. ಹೀಗಿರುವಾಗ ವನ ವನಾಂತರಗಳಲ್ಲಿ ಚರಿಸುತ್ತಿರುವ ಶಾಖಾಚರರು ನಮಗಾಗಿ, ನಮ್ಮ ಪ್ರಯೋಜನಕ್ಕಾಗಿ ಸ್ವಾರ್ಥವಿಲ್ಲದೆ ಕಾದಾಡುವುದೆಂದರೆ ಸಂತೋಷದ ವಿಷಯವಲ್ಲವೇ! ನೋಡಿದರೆ ಈ ಕಪಿವೀರರು ಸಾಮಾನ್ಯ ಕೋಡಗಗಳಂತೆ ಕಂಡರೂ ಶೌರ್ಯ, ಧೈರ್ಯ, ಸಾಹಸಾದಿ ಗುಣಗಳಿಂದ ಬಲಿಷ್ಠವಾದ ಸದ್ಗುಣಗಳ ಪಿಂಡವೆಂದೇ ಹೇಳಬೇಕು.

ಲಕ್ಷ್ಮಣ:– ಅಗ್ರಜನೆ! ಎಷ್ಟೋ ಕಷ್ಟಪಟ್ಟು ಜಯಶೀಲರಾಗಿ ಬಂದಿರುವ ಈ ವಾನರರ ಉಪಕಾರಕ್ಕೆ ಕೃತಜ್ಞತೆಯನ್ನು ಸಲ್ಲಿಸಬೇಕಾದುದು ಯುಕ್ತವಲ್ಲವೇ?

ಮೂಗಿನಲಿ ಬೆರಳಿಟ್ಟು । ತೂಗಿ ನಿಜ ಮಕುಟವನು । ರಾಘವನು ರವಿ ತನುಜ । ಗಾಗ ನಗುತೆಂದ ॥೩॥

ರಾಮ:- ಸುಗ್ರೀವ! ನಿನ್ನಂತಹ ಆಪ್ತ ಸ್ನೇಹಿತರು ಲಭಿಸಬೇಕಾದರೆ ಪೂರ್ವ ಪುಣ್ಯ ಬೇಕು. ರಾಜ್ಯಭ್ರಷ್ಟರಾದ ನಾವೆಲ್ಲಿ? ವನಚರರಾದ ನೀವೆಲ್ಲಿ? ಇಂತಹ ಸಂಘಟನೆಯು ಅಪೂರ್ವವಿದೆ. ಕಾರಣ, ನಿನ್ನಾಜ್ಞಾವರ್ತಿಗಳಾದ ಗುಂಡು ಬಡಿಗೆಯ ಕಪಿವೀರರು ಯುದ್ಧರಂಗಕ್ಕೆ ಹೋಗಿ ಹಿಂಡುಹಿಂಡಾಗಿ ಬರುವ ರಾಕ್ಷಸಾಧಮರನ್ನು ಕೊಂದು ಜಯಶೀಲರಾಗಿ ಬಂದುದನ್ನು ನೋಡಿದರೆ ಪರಮಾಶ್ಚರ್ಯದಿಂದ ಮೂಗಿನಲ್ಲಿ ಬೆರಳಿಟ್ಟು ತಲೆದೂಗಬೇಕು. ರವಿಜಾತನೆ! ನಿನ್ನವರ ಸಾಹಸಕೃತ್ಯಗಳಿಂದ ಅತ್ಯಾನಂದವಾಯಿತು ಬಲ್ಲೆಯಾ!

ಸುಗ್ರೀವ:- ದೇವ! ನಿನ್ನ ದಿವ್ಯ ಪ್ರಭಾವದಿಂದಲೇ ನಮ್ಮವರ ಯೋಗ್ಯತೆಗೆ ಕಳೆಯೇರಿತಲ್ಲದೆ ಮರ ಮರ ಹಾರಾಡುವ ಈ ಕೋಡಗಗಳಿಂದ ಏನಾಗಬಹುದು?

ಬಲು ದಣಿದುದೈ ನಮ್ಮ । ಬಲವೆಲ್ಲವಿಂದಿನಲಿ । ಬಲವಂತ ರಾಕ್ಷಸರ ।
ಗೆಲುವ ಬಗೆಗಾಗಿ ॥೪॥

ರಾಮ:- ವಾನರೇಶ್ವರನೇ! ಯುದ್ಧಕ್ಕಿಳಿದ ಮೇಲೆ ಈ ದಿನದ ಹೋರಾಟವೇ ಅತಿ ಭಯಂಕರ. ಯಮನಂತಿರುವ ನರಾಂತಕ ಮತ್ತು ತ್ರಿಶಿರ, ದೇವಾಂತಕಾದಿ ರಾಕ್ಷಸರ ಪ್ರಪಂಚವೇ ಕಾರ್ಮೋಡದಂತೆ ಕವಿದಿತ್ತಲ್ಲವೇ? ಆದರೂ ನಿನ್ನವರಾದ ಹನುಮ, ನೀಲ, ಅಂಗದಾದಿ ಕಪಿವೀರರು ಆ ರಾಕ್ಷಸರನ್ನು ಧ್ವಂಸಮಾಡಿದ ರೀತಿಕ್ರಮಗಳನ್ನು ಎಷ್ಟು ಕೊಂಡಾಡಿದರೂ ಸಾಲದು. ಆದ್ದರಿಂದ ದೇಹಾಯಾಸವು ಪರಿಹಾರವಾಗುವಂತೆ ವಿಶ್ರಮಿಸಿಕೊಳ್ಳಲಿ! ಉಪಚಾರೋಕ್ತಿಗಳಿಂದ ಸಮಸ್ತ ಕಪಿ ಸೈನಿಕರ ಆಯಾಸವನ್ನು ಹೋಗಲಾಡಿಸಿ ವಿಶ್ರಾಂತಿ ಹೊಂದುವವನಾಗು.

ಸುಗ್ರೀವ:- ದೇವಾದಿದೇವನೆ! ಏನು ಮಾತು? ಸ್ವಾಮಿ ಕಾರ್ಯಕ್ಕಾಗಿ ಹೋರಾಡುವಾಗ ಆಯಾಸವೇ ಬರುವಂತಿಲ್ಲ.

ಎಂಬನಿತರೊಳು ತರಣಿ । ಯಂಬರವನಿಳಿದನಪ । ರಾಂಬುಧಿಗೆ
ಮುಗಿದುವಂ । ದಂಭೋಜನಿಕರ ॥೫॥

ರಾಮ:- ಮಿತ್ರನೆ! ಮಿತ್ರಾತ್ಮನೆ! ಕಾಲಮಾನದಗತಿಯನ್ನು ಜಗತ್ತಿಗೆ ಎತ್ತಿ ತೋರಿಸುವ ಭಗವಾನ್ ಸೂರ್ಯನಾರಾಯಣನು ಪಶ್ಚಿಮಾಂ

ಬುಧಿಯನ್ನು ಸೇರುವ ಹೊತ್ತಾಯಿತು. ಅದೋ ನೋಡು ಸಂಧ್ಯಾರಾಗವು ಮಾಸುತ್ತಿದ್ದಂತೆ ಪದ್ಮಾಕರದ ಪದ್ಮಿನಿಗಳು ಮುಗುಳಾಗುತ್ತಾ ಬರುತ್ತಿವೆ. ಇನ್ನು ನಾವೆಲ್ಲರೂ ನಿತ್ಯವಿಧಿಗಳನ್ನು ಪೂರೈಸಿ, ರಾತ್ರಿಕಾಲವನ್ನು ಸುಖವಾಗಿ ಕಳೆಯೋಣ.

॥ ಭಾಮಿನಿ ॥

ಬಳಿಕ ಮರುದಿನ ಇತ್ತ ರಾವಣ । ನ ಲಘುತರವರ ಸಿಂಹ ಪೀಠದಿ । ಕುಳಿತನೊಡ್ಡೋಲಗದಿ ದಿತಿಜರ ಸಭೆಯ ಮಧ್ಯದಲಿ ॥ ಕಲಹದಲಿ ದೇವಾಂತಕಾದಿಗ । ಳಳಿದ ವೃತ್ತಾಂತವನು ಬಂದಾ । ಖಳ ತಿಲಕಗರುಹಿದರು ಚಾರಕರಧಿಕ ಭೀತಿಯಲಿ ॥೧॥

ರಾವಣ:– (ಸ್ವಗತ) ಅರುಣೋದಯಕ್ಕೆ ಮೊದಲಾಗಿಯೇ ಎದ್ದು ಸ್ನಾನ ಶೌಚಾದಿ ನಿತ್ಯಾನುಷ್ಠಾನಗಳನ್ನು ಪೂರೈಸಿ, ಶಿವದೇವಾಲಯಕ್ಕೆ ಹೋಗಿ ಮಹಾದೇವನನ್ನು ಪೂಜಿಸಿದಂತಾಯಿತು. ಗುರುಗಳಾದ ಶುಕ್ರಾಚಾರ್ಯರ ಆಶೀರ್ವಾದ ಪಡೆದು, ಸಮಸ್ತ ರಾಜ ವೈಭವಗಳಿಂದ ಕೂಡಿ ರಾಜಾಸ್ಥಾನವನ್ನು ಪ್ರವೇಶಿಸಿದಂತಾಯಿತು. ಸುತ್ತಲೂ ನಿರೀಕ್ಷಿಸಿದರೆ ಯಕ್ಷ ರಾಕ್ಷಸಾದಿ ಪ್ರಮುಖರಿಂದ, ಇಷ್ಟಮಿತ್ರಾದಿ ಬಂಧು ವರ್ಗದಿಂದ, ವಂದಿ ಮಾಗಧಾದಿ ಸ್ತುತಿಪಾಠಕರಿಂದ ಶೋಭಿಸುತ್ತಿರುವ ನಮ್ಮೀ ಸಭೆಯು ನಿಶ್ಶಬ್ಧ ವಾತಾವರಣದಲ್ಲಿ ಮೌನ ಮುದ್ರೆಯನ್ನಚ್ಚೊತ್ತಿದಂತೆ ತೋರುತ್ತಿದೆಯಲ್ಲಾ! ಇದೇನು ಕಾರಣ? ಈ ವರೆಗೆ ನಾನು ಗಳಿಸಿದ ಕೀರ್ತಿ ಕುಡಿಯು ಮುರುಟುವಂತಾಯಿತೆ? ವಿವೇಚಿಸುವಾಗ ನರವಾನರರ ಬಲವು ವೃದ್ಧಿಯಾಗುತ್ತಾ ಬಂದಂತೆ ಮಹಾ ವಿಕ್ರಮಿಗಳಾದ ರಾಕ್ಷಸರ ಬಲವು ಕುಂಠಿತವಾಗುತ್ತಾ ಬರತೊಡಗಿದೆ. ಇದೇನು ಕಾಲಾವಸ್ಥೆಯೋ ರಾಮನ ಆತ್ಮ ಪ್ರಭಾವವೋ ಅಥವಾ ದಶಕಂಠನ ಅದೃಷ್ಟ ಫಲವೋ ತಿಳಿಯದು. ಏನೇ ಇರಲಿ! ನಿನ್ನೆ ಕಾಳಗಕ್ಕೈದಿದ ನರಾಂತಕ, ದೇವಾಂತಕಾದಿ ರಾಕ್ಷಸವೀರರ ಪರಿಸ್ಥಿತಿಯೇನಾಯಿತೋ – ವಿಚಾರಿಸೋಣ!

ಚಾರಕರು:– ಜೈ ಪರಾಕು! ರಾವಣೇಶ್ವರ ಸಾರ್ವಭೌಮರ ಪಾದಕ್ಕೆ ವಂದನೆಗಳು.

ರಾವಣ:– ಚಾರಕರೇ! ಏನು ಸಮಾಚಾರ? ನಿನ್ನೆ ನಡೆದ ಯುದ್ಧ

ವಾರ್ತೆಯೇನು? ನಿರ್ಭಯವಾಗಿ ಹೇಳಿರಿ.

ರಾಗ – ಮುಖಾರಿ । ತಾಳ – ಏಕ

ಖಳರಾಯ ಲಾಲಿಸೈ ಬಿನ್ನಪವ । ಮಹಾನುಭಾವ ॥ಪಲ್ಲ॥
ಮೊದಲು ಕಳುಹಿದ ಭಟರನೆಲ್ಲಾ । ಸಂಗ್ರಾಮದಲ್ಲಿ । ಸದೆದು ಸಾಹಸವ ತೋರ್ದರೆಲ್ಲ । ಸದೆದಾ ವಾನರರೆದೆಗೆಡಿಸಿದರೆಂ । ಬುದು ಹರಿದುದು ಲೋಕದ ಜನರಿದಿರಲಿ । ಸದಯನೆ ಮುಂದಭ್ಯುದಯವ ಕಾಣೆವು । ಬೆದರಿದರೆಲ್ಲ ಖಳರಾಯ ॥೧॥

ಚಾರಕರು:– ಮಹಾ ಪ್ರಭುಗಳೇ! ನಮ್ಮ ಬಿನ್ನಪವನು ಕೇಳಬೇಕು ನೀವು ಅಪ್ಪಣೆಕೊಟ್ಟು ಕಳುಹಿಸಿರುವ ರಾಕ್ಷಸವೀರರು ಯುದ್ಧಕ್ಕಿಳಿದಾಗ ರಾಮನ ಸೈನ್ಯದಲ್ಲಿರುವ ಕೋಡಗಗಳೆಲ್ಲ ಬೆದರಿಬಿದ್ದು ತತ್ತರಿಸಿದರು ಒಡೆಯ! ಅವರಲ್ಲಿ ಮುಖ್ಯ ಯೂಥಪತಿಗಳಾದ ನೀಲ, ಹನುಮ, ಅಂಗದಾದಿಗಳು ಪ್ರತಿಭಟಿಸಿ ನಿಂತಾಗ ಅಲ್ಲಿ ನಡೆದ ಸಂಗ್ರಾಮವನ್ನು ಏನೆಂದು ಹೇಳಲಿ? ನಮ್ಮ ಕದನಗಲಿಗಳಾದ ನರಾಂತಕ, ದೇವಾಂತಕ, ಮಹೋದರಾದಿಗಳು ಭಯಂಕರ ಹೋರಾಟ ನಡೆಸಿದರೂ, ಆ ಕಪಿವೀರರು ಜೀವದಾಸೆ ಬಿಟ್ಟು ಯುದ್ಧ ನಡೆಸಿದ್ದರಿಂದ ನಮ್ಮ ಪಕ್ಷಕ್ಕೆ ಅಪಜಯವೇ ಬರುವಂತಾಯಿತು ಒಡನೆ ನಮ್ಮವರೆಲ್ಲ ಬೆಚ್ಚಿ ಹೋದರು ದೇವ್ರೇ!

ರಾವಣ:– ಚಾರಕರೆ! ಏಕೆ ಹೆದರುತ್ತೀರಿ? ನರವಾನರ ದುಷ್ಟಚೇಷ್ಟೆಗಳನ್ನೆಲ್ಲಾ ವಿಸ್ತರಿಸುವುದಕ್ಕೆ ಸಂಶಯಪಡಬೇಡಿ

ಎತ್ತ ನೋಡಿದರತ್ತ ಬಂದು । ಕಪಿಗಳ ಸೇನೆ । ಮುತ್ತಿದೆ ನಗರವ ತಾನಿಂದು । ಚಿತ್ತವಿಸೈ ಬಲು ಮತ್ತಗಜಂಗಳ । ಮೊತ್ತವನುರೆ ಮುಂದೊತ್ತುತ ಬರುತಿರೆ । ಉತ್ತಮ ಹಯಗಳ ಪತ್ತಿಸಮೂಹವ । ನೊತ್ತರಿಸುತ ಸದೆವುತ್ತಗೆಲಿದರು ॥೨॥

ಚಾರಕರು:– ದೇವ್ರೇ! ನಿನ್ನೆ ನಡೆದ ಕಾಳಗವು ಎಂದಿನಂತಲ್ಲ ಬಲು ಭಯಂಕರ. ನೋಟಕ್ಕೆ ಮರ್ಕಟರಂತಿದ್ದರೂ ನೀಲ, ಹನುಮ, ಅಂಗದಾದ್ಯರ ಸಾಹಸಕ್ಕೆ ಹರನಾದರೂ ಹೆದರಬೇಕು. ನರಾಂತಕ, ದೇವಾಂತಕ, ಮದೋನ್ಮತ್ತ, ಮಹೋದರರನ್ನು ಹೊಡೆದು, ಬಡಿದು, ನೆಲಕ್ಕೆ ಅಪ್ಪಳಿಸಿದ್ದಲ್ಲದೆ ಅವರ ಜೊತೆಯಲ್ಲಿದ್ದ ಸೈನಿಕರನ್ನೆಲ್ಲ ಯಮನಲ್ಲಿಗೆ ಅಟ್ಟಿಬಿಟ್ಟರು

ಸ್ವಾಮಿ! ಅಷ್ಟು ಮಾತ್ರವೇ, ಈಗ ಯಾವಕಡೆ ನೋಡಿದರೂ ಮಂಗ, ಮುಸು, ಕರಡಿ, ಸಿಂಗಳೀಕಗಳ ಹಿಂಡೇ ಹಿಂಡು; ನಗರವನ್ನು ಸುತ್ತಲೂ ಮುತ್ತಿ, ಉಗುರುಗಳಿಂದ ಕೀರಿ, ಹಲ್ಲುಗಳಿಂದ ಕಡಿದು, ಕಲ್ಲುಗುಂಡು ಗಳಿಂದ – ಮರದ ತುಂಡುಗಳಿಂದ ಹೊಡೆದು; ಆನೆ, ಕುದುರೆ, ರಥ, ಪದಾತಿಗಳನ್ನು ಕೆಡಹಾಕಿ ಲೂಟಿಮಾಡುತ್ತಿರುವುದನ್ನು ಏನೆಂದು ಹೇಳಲಿ? ದೇವರೇ ಚಿತ್ತೈಸಬೇಕು!

ರಾವಣ:– ಚಾರರೆ! ಸುಮ್ಮನಾಗಿರಿ. ತಿಳಿಯಿತು.

॥ ಭಾಮಿನಿ ॥

ಪೊಡವಿಧರೆ ಸುತ ಕೇಳು ಚಾರರ । ನುಡಿಯು ಕೇಳುತ ರಾವಣನು ಕೆಂ । ಗಿಡಿಗಳನು ಕಂಗಳಲಿ ಸೂಸುತ್ತಾಡನುರೆ ಕಚ್ಚಿ ॥ ಜಡಿದು ಖಡುಗವ ಹೂಂಕರಿಸುತಡಿ । ಗಡಿಗೆ ವೀರಾವೇಷದಿಂದಲಿ । ಕಡೆಯ ಭೈರವನಂತೆ ಖತಿಯನು ತಾಳುತಿಂತೆಂದ ॥೧॥

ರಾವಣ:– (ಸ್ವ) ಹಾ ಹಾ! ಪುತ್ರಶೋಕಕ್ಕಿಂತ ಹೆಚ್ಚಾದ ದುಃಖ ವುಂಟೆ? ಆ ದುಃಖಾಗ್ನಿಯೊಡನೆ ಕ್ರೋಧಾಗ್ನಿಯೂ ಉಕ್ಕೇರುತ್ತಿದೆ. ಹಾ – ನಾಡಾಡಿಗಳಾದ ನರರಿಂದ, ಕಾಡಾಡಿಗಳಾದ ವಾನರರಿಂದ ನರಾಂತಕಾದಿ ವೀರ ಪುತ್ರರು, ಮಹೋದರ ಮೊದಲಾದ ಮಂತ್ರಿಗಳು ಮೃತ್ಯುವಶರಾದ ರೆಂದ ಮೇಲೆ ತ್ರಿಲೋಕ ಡಲ್ಲಣನಾದ ರಾವಣನಿದ್ದು ಏನು ಫಲ? ಮಹಾ ದೇವನಿತ್ತ ಚಂದ್ರಹಾಸವು ಕೈಯಲ್ಲಿರುವಾಗ ಯಾವ ಮೃತ್ಯುವಾಗಲಿ, ಮೃತ್ಯು ಹರನಾದ ರುದ್ರನಾಗಲಿ ಅಡ್ಡೈಸಿದರೂ ರಿಪು ಬಲವನ್ನು ವಿನಾಶ ಮಾಡದೆ ಬಿಡಲಾರೆನು.

ರಾಗ – ಸೌರಾಷ್ಟ್ರ । ತಾಳ – ತ್ರಿವುಡೆ

ಕೇಳಿ ಕಿಡಿ ಕಿಡಿಯಾಗಿ ಪ್ರಳಯದ । ಕಾಲಭೈರವನಂತೆ ನಿರ್ಜರ ಜಾಲನಡುಗಲು ಕನಲುತೆಂದ ಕ । ರಾಳನಾಗಿ ॥೧॥

ರಾವಣ:– (ಸ್ವ) ಏನಾಶ್ಚರ್ಯವಿದು! ಬ್ರಹ್ಮನ ವರಬಲ. ಮಹೇಶ್ವ ರನ ಅನುಗ್ರಹ ಬಲ ನನ್ನಲ್ಲಿರುವಾಗ ಅಪಾರವಾದ ರಾಕ್ಷಸ ಬಲವು ಜೀರ್ಣ ವಾಗುತ್ತ ಪರಾಭವ ಹೊಂದಬೇಕಾದರೆ ಕಾಲವೇ ಪ್ರತಿಕೂಲವಿರಬೇಕು. ಇರಲಿ! ಕಾಲನನ್ನೇ ಗೆದ್ದು, ದಿಕ್ಪಾಲರ ಸೊಕ್ಕನ್ನಡಗಿಸಿದ ಕಾಲಭೈರವನೇ

ನಾನಿರುವಾಗ ಪ್ರಳಯ ಕಾಲವೇ ಬರಲಿ! ನರವಾನರರ ಬಲವನ್ನು ನಿರ್ನಾಮಮಾಡದೆ ಸರ್ವಥಾ ಇರಲಾರೆನು.

ಕುರಿಗೆ ಹೆಬ್ಬುಲಿಯಂಜುವುದೆ ಘಡ । ನರರ ವಾನರರಾರ್ಭಟೆಗೆ ನಾ ।
ನರರೆ ಹಿಮ್ಮೆಟ್ಟುವೆನೆ ಸಾಹಸ । ದಿರವನೀಗ ॥೨॥

ರಾವಣ:- (ಸ್ವ) ದೇವಾದಿದೇವತೆಗಳನ್ನು ಗೆದ್ದು, ಹರ ಬ್ರಹ್ಮರನ್ನು ಕೂಡಾ ನನ್ನವರನ್ನಾಗಿ ಮಾಡಿಕೊಂಡು ಮೆರೆದಾಡಿದ ರಾವಣೇಂದ್ರನ ಸತ್ವವು ಈರೇಳು ಲೋಕದಲ್ಲಿಯೇ ಪ್ರಸಿದ್ಧವಿದೆ ಹೀಗಿರುವಾಗ ಕುರಿಗಳಾದ ರಾಮ ಲಕ್ಷ್ಮಣರಿಗೆ, ಸುಗ್ರೀವಾದಿ ಅಲ್ಪ ಮರ್ಕಟರಿಗೆ ಹೆಬ್ಬುಲಿಯಂತಹ ಈ ದಶಕಂಠನು ಹೆದರುವ ಮಾತುಂಟೇ? ಧೂಮರಾಶಿಯು ಉಬ್ಬರಿಸಿ ಅಬ್ಬರಿಸಿದ ಹಾಗೆ ರಿಪುವರ್ಗವು ಆರ್ಭಟಿಸಿದ ಮಾತ್ರಕ್ಕೆ ಸಮುದ್ರ ರಾಜನಂತವನು ಹಿಮ್ಮೆಟ್ಟುವ ಹಾಗಿಲ್ಲ.

ತೋರುವೆನು ಕಪಿಕಟಕದಸುಗಳ । ಹೀರುವೆನು ಖಳ ವೈರಿ ಲಕ್ಷ್ಮಣ ।
ರಾರು ಭಟೆಗಳ ನಿಲಿಸುವೆನು ರಣ । ಧಾರುಣಿಯಲಿ ॥೩॥

ರಾವಣ:- (ಸ್ವ) ಈದಿನ ನನ್ನ ಬಾಹುಬಲವನ್ನೂ, ಸಾಹಸದ ಪರಮಾವಧಿಯನ್ನೂ ತೋರಲೇ ಬೇಕು. ಹತ್ತು ಕೈಗಳಲ್ಲಿ ಹತ್ತು ಬಿಲ್ಲುಗಳನ್ನಾಂತು ಹತ್ತೇ ಬಾಣಗಳಿಂದ ಒಂದೇ ಬಾರಿಗೆ ಕುರಿಹಿಂಡಿನಂತಿರುವ ಕಪಿಕುಲವನ್ನು ನೆತ್ತರು ಕಾರಿ ಸಾಯುವಂತೆ ಕೆಡಹಲೇ ಬೇಕು. ಆ ಮೇಲೆ ರಣಾಂಗಣಕ್ಕೆ ಇದಿರಾಗಿ ಬಂದ ರಾಮಲಕ್ಷ್ಮಣರ ಆರುಭಟೆಯನ್ನಳಿಸಿ ರಣಭಯಂಕರನೆಂಬ ಬಿರುದನ್ನು ಮೆರೆಸಲೇ ಬೇಕು.

ಇಂದು ರಾಮನ ರಣದಿ ಕೆಡಹದೆ । ಹಿಂದು ಮುಂದೇನಾದೆ ನಾದರೆ ।
ತಂದೆತಾಯಿಗಳಿಂಗೆ ಜನಿಸಿದ ಕಂದನಲ್ಲ ॥೪॥

ರಾವಣ:- (ಸ್ವ) ನನ್ನ ಅಜಾಗ್ರತೆಯಿಂದ ರಾಮನು ಅಲ್ಪ ಮಾನವನೆಂಬ ವಿಚಾರದಿಂದ ನಾನು ತೊಡಗಿದ ಯುದ್ಧವು ವಿಫಲವಾಯಿತು; ನಿಜ ನಿಜ. ಆದರೆ ಇಂದಿನ ಯುದ್ಧ ನೀತಿಯೇ ಬೇರೆ ಅಮೋಘವಾದ ದಿವ್ಯಾಸ್ತ್ರಗಳನ್ನು ಬಿಟ್ಟು ಧ್ವಂಸಗೊಳಿಸುವುದು ನಿಶ್ಚಯ. ಅಂತಹ ಸಂಹಾರ ಕಾರ್ಯವು ನಿಷ್ಪ್ರಯೋಜಕವಾದರೆ ದಶಶಿರಸ್ಸುಗಳುಳ್ಳ ಈ ರಾವಣನು ಪೂಜ್ಯರಾದ

ವಿಶ್ರವಸ್ ಋಷಿಗಳ, ವೀರ ಮಾತೆಯೂದ ಕೈಕಸಾ ದೇವಿಯ ಪುತ್ರನೇ ಅಲ್ಲವೆಂದು ಜಗತ್ರಯವೇ ತಿಳಿದಿರಲಿ!

ಎನುತ ಕೊನೆಮೀಸೆಗಳ ತಿರುಹುತ । ದನುಜಪತಿ ನಿಂದಿರಲು ಕಾಣುತ । ಅನಘಮತಿಯತಿಕಾಯ ಮಣಿದೆಂ । ದನು ಪಿತಂಗೆ ||೫||

ರಾವಣ:– ಸಾರಥಿಯೆ! ಮಣಿರಥವು ಸಿದ್ಧವಾಗಲಿ! ಸಮಸ್ತ ಬಿರುದಗಳು ಸನ್ನಿಹಿತವಾಗಲಿ! ಭೇರಿ, ನಗಾರಿ ಮೊದಲಾದ ರಣವಾದ್ಯಗಳು ಬಾರಿಸಲ್ಪಡಲಿ! ನೋಡಿದೆಯೂ ಮುಖದಲ್ಲಿರುವುದು ಗಂಡು ಮೀಸೆಯಾದರೆ ಇಂದಿನ ಕೊಳುಗುಳದಲ್ಲಿ ರಾಮಲಕ್ಷ್ಮಣರನ್ನು ಕೊಂದೇ ಬಿಡುವೆನು ಬಲ್ಲೆಯಾ!

ಅತಿಕಾಯ:– (ಸ್ವಗತ) ಜೀವನು ಪರಮಾತ್ಮನ ಅಂಶನಿದ್ದರೂ ಪ್ರಪಂಚದ ಉತ್ಪತ್ತಿಗೆಲ್ಲಾ ಸಹಾಯಕವಾದ ಮಾಯಾಶಕ್ತಿಯ ದೆಸೆಯಿಂದ ತನ್ನ ನಿಜತ್ವವನ್ನೇ ಮರೆತು ಭವಚಕ್ರದಲ್ಲಿ ತೊಳಲುತ್ತಾ ದುಃಖಪಡುವನು. ಒಂದೊಮ್ಮೆ ಮಾಯೆಯ ಕುರಿತು ವಿವೇಚನೆ ಮಾಡುವ ಶಕ್ತಿ ಇದ್ದರೂ ಸಂಸಾರದಲ್ಲಿ ಬಿದ್ದನೆಂದರೆ ಆತ್ಮದ ಮರವೆಯುಂಟಾಗುವುದು. ಆದುದರಿಂದ ಅಜ್ಞಾನಾಂಧಕಾರವು ಕವಿಯಲ್ಪಟ್ಟು, ಅಹಂಕಾರವು ಕಲೆದೋರಿ, ಕ್ಲೇಶ ಪಾಶಗಳಿಂದ ಬಿಗಿಯಲ್ಪಟ್ಟು ಕುಹಕ ಕಲ್ಪನೆಗಳ ಬಿರುಗಾಳಿಯ ಮೂಲಕ ಆತನಲ್ಲಿದ್ದ ಜ್ಞಾನಜ್ಯೋತಿಯು ನಂದಿ ಹೋಗುವುದು. ಷಡ್ವೈರಿಗಳಲ್ಲಿ ಬಲವಂತವಾದ ಕಾಮೋದ್ರೇಕವುಂಟಾಗಿ ಹೆಣ್ಣು, ಮಣ್ಣು, ಹೊನ್ನು ಇವುಗಳ ದೆಸೆಯಿಂದ ದುಃಖ ಪರಂಪರೆಯೇ ಅನುಭವಕ್ಕೆ ಬರುವುದು. ಅಂದರೆ ಆಶೆಯ ಮೂಲವೇ ದುಃಖ, ದುಃಖಾಂತವೇ ಸುಖ, ಈ ಸುಖವು ಆನಂದ ರೂಪವಾಗಿ ವಿಷಯಾನಂದದಿಂದ ತೊಡಗಿ ಬ್ರಹ್ಮಾನಂದದ ವರೆಗಿದೆ. ಆದ್ದರಿಂದ ಜ್ಞಾನಿ ಪುರುಷನು ನಿಷ್ಕಾಮಕರ್ಮದಿಂದ ಬ್ರಹ್ಮಾನಂದ ಪ್ರಾಪ್ತಿಗಾಗಿ ಆತ್ಮಾರ್ಪಣ ಬುದ್ಧಿಯಿಂದ ಸಿದ್ಧಿ ಹೊಂದುವನು. ಹೇಗೆ.... ದೇಹವು ಆತ್ಮನಲ್ಲಿ, ಮನವು ಜ್ಞಾನದಲ್ಲಿ, ಭಾವವು ನಿರ್ಭಾವದಲ್ಲಿ, ಮಮತೆಯು ಶಾಂತಿಯಲ್ಲಿ ಬೆರೆತುಹೋದಾಗ ಸರ್ವಾರ್ಪಣ ಭಾವಿಯಾಗಿ ನಿತ್ಯ ಮುಕ್ತನಾಗಿ, ಆನಂದ ಪಡುವನು. ಆರಂಭದಲ್ಲಿ ಆತ್ಮನಿಗೆ ಜ್ಞಾನವಿಲ್ಲದಿರಲು ಕರ್ಮಪಾಶವನ್ನು ನಾಶಮಾಡಲಾರ. ಆತ್ಮಜ್ಞಾನಿಯಾದ ಮೇಲೆ ಮುಕುರದ ಬಿಂಬದಂತೆ, ಜ್ಞಾನದಲ್ಲಿ ಕನಕದಂತೆ, ಸಂಶಯ ರಹಿತನಾಗುವನು. ಹೀಗಾಗಿ

ಬೇಕಾದರೆ ಪಾಪನಾಶನೆಯಿಲ್ಲದೆ ಸತ್ಯವ್ರತಿಯಾಗಿ, ಪರಸ್ತ್ರೀಯನ್ನು ತಾಯಿಯೆಂದೆಣಿಸುತ್ತಾ ಜಿತೇಂದ್ರಿಯನಾಗಿ, ನಿರಭಿಮಾನಿಯಾಗಿ ಸಾಧನ ಚತುಷ್ಟಯಗಳಲ್ಲಿ ನಿರತನಾಗಬೇಕು. ಇದುವೇ ಸಚ್ಚರಿತ್ರರ, ಸನ್ಮಾರ್ಗಿಗಳ ಸಲ್ಲಕ್ಷಣ. ಆದರೆ ನಮ್ಮ ತಂದೆಯೆಂಬವರು ತಳೆದ ವಿಚಾರವೇ ಬೇರೆ. ವೇದವೇದಾಂಗಗಳನ್ನು ಬಲ್ಲವರಾದರೂ ತಮೋಗುಣ ಪ್ರಧಾನವಾದ ಅಜ್ಞಾನದ ಅಂಧಕಾರದಲ್ಲಿದ್ದು ದುರ್ವ್ಯಸನಿಗಳಾಗಿ ವರ್ತಿಸುತ್ತಿದ್ದಾರೆ. ಆದ್ದರಿಂದ ವೀರಪುತ್ರನಾದ ನಾನು ಕೆಲವೇ ನೀತಿ ಸೂಕ್ತಿಗಳಿಂದ ಜ್ಞಾನಾಂಜನ ಹಾಕಿ ಜಾಗ್ರತಗೊಳಿಸುವುದು ಅಗತ್ಯವಿದೆ. ತೀರ್ಥರೂಪ ಮಹಾಶಯರೇ! ಸಾಷ್ಟಾಂಗ ವಂದನೆಗಳು.

ರಾವಣ:- ಅತಿಕಾಯ! ಎದ್ದೇಳು. ತಟ್ಟನೆ ಬಂದು ಏತಕ್ಕಾಗಿ ವಂದಿಸಿಕೊಂಡೆ?

ಅತಿ:- ಅರಿಕೆಮಾಡಿಕೊಳ್ಳಲೇ!

ರಾಗ - ಕಾಪಿ । ತಾಳ - ಅಷ್ಟ

ಯಾತಕೆ ಮರುಳಾದೆ ತಾತ । ರಘುನಾಥನೊಳ್ ಕಲಹವೆ ಲೋಕ ಪ್ರಖ್ಯಾತ ॥ ಪಲ್ಲವಿ ॥

ಅತಿ:- ಜನಕನವರೇ! ವಿಜ್ಞಾಪಿಸುವೆನು. ಈ ಜಗತ್ತಿನ ಉದ್ದಗಲಕ್ಕೂ ಹಬ್ಬಿದ ಮಾಯಾಜಾಲವನ್ನು ಹಿಡಿದು ಕಾಲನೆಂಬ ಜಾಲಗಾರನು ಬಡವ- ಬಲ್ಲಿದರೆಂಬ ಭೇದವಿಲ್ಲದೆ ಸಮಸ್ತರನ್ನು ಕಲ್ಲಿಯೊಳಗೆ ತುಂಬಿ ಸತ್ವ ಸಾಹಸಗಳನ್ನು ಮುರಿದು ವಶಮಾಡಿಕೊಳ್ಳುವನು. ಕಾಲವೇ ಜೀವಿಗಳ ಉನ್ನತಿ ಅವನತಿಗಳಿಗೆ ಕಾರಣವಾದ್ದರಿಂದ ತ್ರಿಲೋಕಮಲ್ಲರೆಂಬ ಬಿರುದು ಪಡೆದ ತಮ್ಮಪಕ್ಷದ ರಾಕ್ಷಸರು ದುರ್ಬಲರಾಗಿಯೂ, ನರವಾನರರೆಲ್ಲ ಪ್ರಬಲರಾಗಿಯೂ ಮೆರೆಯುವಂತಾಯಿತು. ಅಲ್ಲದೆ ಮೋಹವಶರಾಗಿ ಸುಜ್ಞಾನವಿಲ್ಲದೆ ಸೀತಾದೇವಿಯನ್ನು ತಂದು ಶ್ರೀರಾಮನಲ್ಲಿ ಯುದ್ಧಹೂಡಿದ್ದರಿಂದ ತಮ್ಮಪಕ್ಷವು ಪ್ರಬಲವಾದರೂ ಸೋಲುವಂತಾಯಿತು. ತಂದೆಯವರೇ! ಸ್ತ್ರೀಬುದ್ಧಿ ಪ್ರಳಯಾಂತಿಕಾ ಎಂಬ ಗಾದೆಯಂತೆ ಶೂರ್ಪನಖಿಯ ಮಾತು ಕೇಳಿ ಸರ್ವನಾಶಕ್ಕೆ ಕಾರಣವಾದ ಪಾಪಕಾರ್ಯಕ್ಕೆ ಕೈಹಾಕಿದ್ದನ್ನು ನೋಡಿದರೆ ಏನೆನ್ನುವುದೋ ತಿಳಿಯದು. ತಾವಾದರೋ ವೇದ ವೇದಾಂಗ ಪಾರಂಗ

ತರಾಗಿ, ಸಕಲೈಶ್ವರ್ಯ ಸಂಪನ್ನರಾಗಿ, ಕಳೆಯಿಲ್ಲದ ಬೆಳೆಯಂತೆ ಇಳೆಯಲ್ಲಿ ಮೆರೆದಾಡಿದವರು. ಹೀಗಿರುತ್ತಾ ಅಹಂಕಾರಜನ್ಯವಾದ ಸ್ತ್ರೀವ್ಯಸನಕ್ಕೋಸ್ಕರ ಗಾಗಿ ಪರಸ್ತ್ರೀಯಾದ ಸೀತಾ ದೇವಿಯನ್ನು ಸೆರೆಯಲ್ಲಿಟ್ಟು, ಶ್ರೀರಾಮನಲ್ಲಿ ಬವರವೊಡ್ಡಿರುವುದು ಧರ್ಮವಲ್ಲ. ಇದರಿಂದ ಜಗತ್ರಯದಲ್ಲಿ ಅಪವಾದ-ಅಪಕೀರ್ತಿ ಬರುವುದಲ್ಲದೆ, ಯಾವ ಶ್ರೇಯಸ್ಸೂ ಲಭಿಸುವಂತಿಲ್ಲ. ಏಕೆಂದರೆ ಸೀತಾ ರಾಮಲಕ್ಷ್ಮಣರು ನಿಜಕ್ಕೂ ಮನುಷ್ಯರಂತಲ್ಲ.

ರಾವಣ:– ಅತಿಕಾಯನೇ! ನಿನ್ನ ನೀತಿತತ್ವ ಯಾರಿಗೆಬೇಕು? ರಘು ಕುಲೋದ್ಭವನಾದ ರಾಮನ ವಿಷಯವಾಗಿ ನೀನು ತಿಳಿದ ವೈಶಿಷ್ಟ್ಯಗಳೇನು?

ಸಕಲಲೋಕೈಕ ನಾಯಕನು । ಸರ್ವಾತ್ಮಕನು ಸರ್ವರನು ರಕ್ಷಿಸುವ ದೇವನವನು । ಮುಕುತಿದಾಯಕನು ಶಾಶ್ವತನು । ಹೆಚ್ಚು ಸ್ತುತಿಸಲ ದೇನಾದಿ ವಸ್ತು ರಾಘವನು ||೧||

ಅತಿ:– ಪಿತೃ ಮಹಾಶಯನೇ! ಶ್ರೀರಾಮನು "ಸರ್ವಂ ವಿಷ್ಣು ಮಯಂ ಜಗತ್" ಎಂಬಂತೆ ವಿಶ್ವವ್ಯಾಪಕನು; ವಿರಾಡ್ರೂಪನು. ಆತನ ಶಿರಸ್ಸೇ ಬ್ರಹ್ಮಲೋಕ. ನೇತ್ರಗಳೇ ಚಂದ್ರಸೂರ್ಯರು, ಕಿವಿಗಳೇ ದಿಕ್ಕು ಗಳು, ದಿಕ್ಪಾಲರೇ ಬಾಹುಗಳು, ಗಿರಿಗಳೇ ಅಸ್ಥಿಗಳು, ಸಮುದ್ರವೇ ಜಿಹ್ವೆ, ವಾಯುವು ಶ್ವಾಸ, ಅಗ್ನಿಯು ಮುಖ, ಅಹಂಕಾರವೇ ಶಿವನಾಗಿರುವನು. ಅಪರಾಪರ, ಆದಿ ವಸ್ತುವೇ ರಾಮನಾಗಿ ಸೃಷ್ಟಿ ಸ್ಥಿತಿಲಯಗಳೆಂಬ ಕಾರ್ಯ ಕ್ರಮಗಳನ್ನು ಸಂಕಲ್ಪ ಮಾತ್ರದಿಂದ ನಡೆಸುವವನಾಗಿ, ಸಮಸ್ತ ಜೀವಿಗಳ ಅಂತರಾತ್ಮನಾಗಿ, ಸಕಲ ಲೋಕಗಳಿಗೆ ಏಕೈಕನಾಗಿ, ದುಷ್ಟ ನಿಗ್ರಹ-ಶಿಷ್ಟ ಪರಿಪಾಲನೆಯೆಂಬ ಧರ್ಮ ಸ್ಥಾಪನೆಯ ಕಾರ್ಯದಲ್ಲಿ ತತ್ಪರನಾಗಿ ರುವನು. ಶ್ರೀರಾಮನೊಡನೆ ಸೆಣಸಾಡಿ ಬದುಕಿರುವವರಾರು? ದೃಷ್ಟಾಂತ ಕ್ಕಾಗಿ ಹೇಳುವುದಾದರೆ ವೇದಗಳನ್ನೊಯ್ದ ಸೋಮಕಾಸುರನ, ಗಂಧವತೀ ಪೃಥ್ವೀದೇವಿಯನ್ನಡಗಿಸಿದ ಹಿರಣ್ಯಾಕ್ಷನ, ತರಳ ಪ್ರಹ್ಲಾದನನ್ನು ಕಷ್ಟ ಪಡಿಸಿದ ಹಿರಣ್ಯಕಶ್ಯಪನ ಗತಿಯೇನಾಯಿತು? ಸಮುದ್ರದಲ್ಲಿ ಮುಳುಗಿದ ಮಂದರಾದ್ರಿಯನ್ನು ಬೆನ್ನಿನಲ್ಲೆತ್ತಿದ ಕೂರ್ಮನಾರು? ದುಷ್ಟ ಕ್ಷತ್ರಿಯ ರನ್ನು ಇಪ್ಪತ್ತೊಂದು ಭಾರಿ ನಿರ್ನಾಮ ಮಾಡಿದ ಭಾರ್ಗವನಾರು? ಆ ಮಹಾ ವಿಷ್ಣುವೇ ಶ್ರೀರಾಮನಾಗಿ, ಲಕ್ಷ್ಮೀದೇವಿಯೇ ಸೀತೆಯಾಗಿ, ಶೇಷ

ನೇ ಲಕ್ಷ್ಮಣನಾಗಿ ಅವತರಿಸಿರುವರು. ಜನಕನೇ! ಶ್ರೀರಾಮನು ದೇವತೆಗಳ ಪ್ರಾರ್ಥನೆಯಂತೆ, ಬ್ರಹ್ಮಾದಿಗಳ ವರ ಬಲಕ್ಕೆ ತೊಡಕಾಗದಂತೆ, ಲಂಕಾನಿವಾಸಿಗಳ ಸಂಹಾರ ಕಾರ್ಯವನ್ನು ಸಾಗಿಸುತ್ತಾ ಇರುವನು. ಭಕ್ತರಿಗೆ ಮುಕ್ತಿಯಿತ್ತು, ಸಾಧುಸಜ್ಜನರ ಇಷ್ಟಾರ್ಥವನ್ನು ಪೂರೈಸುತ್ತಾ ಜಲಪ್ರಳಯವಾದರೂ ನಾಶವಿಲ್ಲದೆ ವಟಪತ್ರದ ಮೇಲೆ ಮಲಗಿಕೊಂಡಿರುವ ದೇವಾದಿ ದೇವನೊಡನೆ ದ್ವೇಷ ಕಟ್ಟಿದರೆ ಸರ್ವಥಾ ಜಯವಿಲ್ಲ.

ರಾವಣ:- ಸಾಕು ನಿನ್ನುಪದೇಶ. ವಿಭೀಷಣ, ಮಾರೀಚ, ಕೈಕಸಿ, ಮಾಲ್ಯವಂತರು ಹೇಳಿದ ಕಥೆಯೇ ನಿನ್ನದು. ನಾನಷ್ಟು ಮೂಢನೆಂದು ತಿಳಿದೆಯಾ? ಬ್ರಹ್ಮನ ವರ, ಮಹಾದೇವನ ದಯೆ, ಅತುಲ ಪೌರುಷವೂ ನನ್ನಲ್ಲಿರುವಾಗ ಮಾನವರಿಂದೇನಾಗಬಹುದು? ರವಿಕುಲಜನಾದ ಅನರಣ್ಯನನ್ನು ಕೆಡಹಾಕಿದ ಈ ರಾವಣನು ಅದೇ ಕುಲದಲ್ಲಿ ಹುಟ್ಟಿದ ರಾಮನಿಗೆ ಹೆದರುವುದೆಂದರೇನು? ನೋಡಿದೆಯಾ! ಈ ಚಂದ್ರಹಾಸದಿಂದಲೇ ಅವನನ್ನಿರಿದು ಕೊಂದೇ ಬಿಟ್ಟೇನು ಬಲ್ಲೆಯಾ?

ಇರಿತ ಕಂಬರವಳುಕುವುದೇ । ನೊರ - ಜುರುಬಿದಡಗ್ನಿಗೆ ನೋವು ತಾಗುವುದೇ । ಇರುವೆ ಕಚ್ಚಿದರೆ ಬೆಚ್ಚುವುದೇ । ಸುರ - ಗಿರಿಯು ನಿನ್ನದಟು ರಾಘವನೊಳೊಪ್ಪುವುದೆ ॥೨॥

ಅತಿ:- ಅಪ್ಪಾ! ಉದ್ಯೋಗ, ಸಾಹಸ, ಧೈರ್ಯ, ಬುದ್ಧಿ, ಶಕ್ತಿ, ಪರಾಕ್ರಮಗಳೆಂಬ ಆರು ಬಗೆಯ ಪ್ರಯತ್ನಗಳಿದ್ದರೂ ದೈವಾನುಕೂಲವಿಲ್ಲದೆ ಯಾವ ಕೆಲಸವೂ ಸಫಲವಾಗಲಿಕ್ಕಿಲ್ಲ. ಅಂತಹ ಪರದೈವವೇ ರಾಮಚಂದ್ರನಿರುವಾಗ ಜಗತ್ತೆಲ್ಲ ಮಾಯೆಯಿಂದಾವರಿಸಲ್ಪಟ್ಟರೂ ಅಳಿಯುವಂತಿಲ್ಲ. ಆಕಾಶವನ್ನೇ ಇರಿದುಬಿಡುತ್ತೇನೆಂದು ಕೈಯೆತ್ತಿದರೆ ಯಾರಿಗೆ ಸಾಧ್ಯ? ಅಗ್ನಿಯು ಸಪ್ತಜ್ವಾಲೆಯಿಂದುರಿಯುವಾಗ ನೊರಜುಗಳು ಹೋಗಿ ತಾಗಿದರೆ ಯಜ್ಞೇಶ್ವರನ ಪ್ರತಾಪವು ನಂದಿಹೋದೀತೇ? ಅಲ್ಪ ಇರುವೆಗಳು ಕೂಡಿ ಕಡಿದ ಮಾತ್ರಕ್ಕೆ ಮೇರುಪರ್ವತವೇನು ಬೆಚ್ಚುವಂತಿಲ್ಲ. ಹಾಗೆ ಆಕಾಶದಂತೆ ಸರ್ವವ್ಯಾಪಿಯಾದ ಯಜ್ಞೇಶ್ವರನಂತೆ ಜ್ವಲಿಸುತ್ತಿರುವ ಮೇರುಪರ್ವತದಂತೆ ನಿಶ್ಚಲ ಶಕ್ತಿಯುಳ್ಳ ಶ್ರೀರಾಮನ ಮುಂದೆ ರಾಕ್ಷಸರ ವಿಕ್ರ

ಮಾತಿಶಯವು ಎಂದೂ ನಡೆಯಲಾರದು. ಆತನು ದನುಜಾರಣ್ಯಕ್ಕೆ ದಾವಾಗ್ನಿ; ಮುಗಿಲ ಮರೆಯ ಸೂರ್ಯನಂತೆ, ಒರೆಯ ಮರೆಯ ಅಲಗಿನಂತೆ, ಹಣ್ಣಿನೊಳಗಣ ತನಿರಸದಂತೆ ಸರ್ವಾಂತರ್ಯಾಮಿ. ಮುನಿದು ನಿಂತರೆ ಪ್ರತಿಭಟಿಸುವವರಾರು? ಕರ್ಪೂರದ ಬೆಟ್ಟಕ್ಕೆ ಉರಿ ಹಿಡಿದಮೇಲೆ ಇದ್ದಲಾಗುವುದುಂಟೇ? ಜನಕಾ! ಶ್ರೀರಾಮನಲ್ಲಿ ಯುದ್ಧ ಹೂಡುವುದು ನ್ಯಾಯವಲ್ಲ. ತಮ್ಮಲ್ಲಿ ಭುಜಬಲವಿದ್ದರೂ ನಡೆಯಲಾರದು.

ರಾವಣ:- ಅತಿಕಾಯ! ರಾಮನ ವಿಷಯವಾಗಿ ನೀನು ಹೇಳಿದ ಮಾತೆಲ್ಲವೂ ಅತಿಶಯೋಕ್ತಿಯೇ! ಕಡುಗಲಿಗಳಾದ ರಾಕ್ಷಸರಿದಿರು ಆತನ ಸಾಹಸತ್ವವು ನಡೆಯುವ ಹಾಗಿಲ್ಲ.

ಕಡುಗಲಿ ಖರನೆಲ್ಲಿ ಪೋದ । ಹಿಂದೆ ಅಡವಿಯೊಳ್ ವೀರ ವಿರಾಧನೇ
ನಾದ । ಬಿಡದೆ ಯೋಚಿಸಿ ನೀನೆ ನೋಡು । ಜಗದೊಡೆಯ ರಾಮನ ಕೆಣ
ಕಲು ಬಂತು ಕೇಡು ॥೩॥

ಅತಿ:- ಜೀಯ ತಾವೇನು ತಿಳಿಯದವರಲ್ಲ. ತಿಳಿದೂ ತಿಳಿಯದವರಂತೆ ವರ್ತಿಸುತ್ತಿರುವ ತಮ್ಮ ಚಿತ್ತಕ್ಕೆ ಏನೆಂದು ಹೇಳಲಿ! ಆದರೂ ಹೇಳಬೇಕಿದೆ. ಜನಸ್ಥಾನದಲ್ಲಿದ್ದ ಕುಂಭೀನಸೀ ಪುತ್ರ ಜಟಾಸುರನನ್ನು ಮತ್ತು ಹದಿನಾಲ್ಕು ಸಾವಿರ ರಾಕ್ಷಸರನ್ನು ವಿನಾಶಗೊಳಿಸಿದವನಾರು? ಹಸಿದೊಗಲಿನ ಉಡುಗೆಯುಟ್ಟು ತ್ರಿಶೂಲಪಾಣಿಯಂತಿದ್ದ ವಿರಾಧನ ಗತಿಯೇನಾಯಿತು? ಕಿಷ್ಕಿಂಧಾಧಿಪತಿ ವಾಲಿಯ ವಿಚಾರ ತಾವೇ ಬಲ್ಲಿರಿ! ಆತನನ್ನು ಒಂದೇ ಶರದಿಂದ ಕೆಡಹಾಕಿದವನು ರಾಮಚಂದ್ರನಲ್ಲವೇ! ಹಾಗೆ ಗುಂಡು ಬಡಿಗೆಯವರ ತಂಡಕಟ್ಟಿಕೊಂಡು, ಶರಧಿಗೆ ಸೇತುವನ್ನು ಬಲಿದು; ಕರಿ, ರಥ, ಹಯ, ಪದಾತಿಗಳೆಂಬ ಚತುರ್ಬಲವನ್ನೇರ್ಪಡಿಸಿಕೊಂಡು ಯುದ್ಧ ಹೂಡಿದ್ದಲ್ಲದೆ ದಿನೇ ದಿನೇ ವಿಜಯ ಧ್ವಜವನ್ನು ಹಾರಿಸುತ್ತಾ ಮುಂದೆ ಬರುವುದನ್ನು ಈಗಲೂ ನೋಡುತ್ತಿದ್ದೀರಿ. ಹೆಚ್ಚೇಕೆ ಮಾಯಾವಿ ಮಾರೀಚನ ಕೊರಳ ಮೇಲೆ ಕೋಲ ಕುಣಿಸಿದವನು, ಲೋಕಭೀಷಣನಾದ ಕುಂಭಕರ್ಣನ ತಾಣ ಮುರಿದವನು, ಸಾಮಾನ್ಯ ಮನುಷ್ಯನಿರಬಹುದೇ? ಈ ಪರಿಗೆ ನಡೆದ ಯುದ್ಧದ ಪರಿಣಾಮವನ್ನು ಯೋಚಿಸುವಾಗ ಮುಂದಣ ಜಯಾಪಜಯ ಯಾವ ಪಕ್ಷಕ್ಕಿದೆಯೆಂಬುದನ್ನು ಈಗಲೇ ನಿರ್ಧರಿಸಬಹುದು.

ಆದ್ದರಿಂದ ನಿರ್ಜರರ ದೂರಿಗಾಗಿ, ಕರ್ಬುರರ ವಿನಾಶಕ್ಕಾಗಿ ಅವತರಿಸಿದ
ಶ್ರೀರಾಮನನ್ನು ಕೆಣಕಿದ್ದಲ್ಲಿ ಲಂಕಾ ನಿವಾಸಿಗಳಿಗೆಲ್ಲ ಕೇಡು ಬಂತೆಂಬುದು
ನಿರ್ವಾದವೇ!

ರಾವಣ:– ಗತಕಾಲದ ಸಂಗತಿಯನ್ನು ಪುನರುಕ್ತಿಯಾಗಿ ಹರಟು
ವುದು ಬೇಡ. ಸರ್ವರ ಕ್ಷೇಮಲಾಭಕ್ಕಾಗಿ ಇನ್ನು ನಡೆಸಬೇಕಾದ ಕರ್ತವ್ಯ
ಗಳೇನೆಂಬುದನ್ನು ಈಗಲೇ ಹೇಳಿಬಿಡು.

॥ ಭಾಮಿನಿ ॥

ಸೀತೆಯನು ರಘುವರನಿಗಿತ್ತನುಜಾತನಾದ ವಿಭೀಷಣನ ಸಂ । ಪ್ರೀತಿ
ಯಲಿ ಕರತಂದು ರಾಜ್ಯವನಾಳುವುದು ಸುಖದಿ ॥

ಅತಿ:– ತಂದೆಯವರೇ! ಭಿನ್ನಾಭಿಪ್ರಾಯಗಳುಳ್ಳ ಈ ಜಗತ್ತಿನಲ್ಲಿ
ನೀಚರಾದವರು ಸದ್ಗುಣಿಗಳನ್ನು ಅಸಮರ್ಥರೆಂದೂ ಡಾಂಬಿಕರನ್ನು, ನಿರ್ದ
ಯರನ್ನು, ನ್ಯಾಯವಿಲ್ಲದೆ ಶಿಕ್ಷಿಸುವವರನ್ನು ಸಮರ್ಥರೆಂದೂ ಗೌರವಿಸುವ
ರು. ಈ ದೃಷ್ಟಿಯಿಂದ ಶ್ರೀರಾಮನ ಕುರಿತು ಅಲ್ಪ ಮನುಷ್ಯನೆಂದು ತಿಳಿದಿ
ರಬಹುದು ಆದರೆ ಆ ಪ್ರಮೇಯನೂ, ಮಹತೋಮಹೀಮನೂ, ಸರ್ವ
ಶಕ್ತನೂ ಆದ ರಾಮನೇ ಸಿಟ್ಟುಗೊಂಡರೆ ತಡೆಯುವವರೇ ಇಲ್ಲ. ಇದ್ದರೆ
ಸಿಂಹಕ್ಕೆದಿರಾದ ಹುಲ್ಲೆಯಂತೆ, ಪ್ರಳಯಾಗ್ನಿಯನ್ನು ಕುಡುಕಿದ ಪತಂಗ
ದಂತೆ, ಸೂರ್ಯನ ಮುಂದಿರುವ ಕೀಟದಂತೆ ನಾಶವಾಗುವುದು ನಿಜ. ತಾತ!
ಸತ್ಯಯುಗವಾದ ಕೃತಯುಗದಲ್ಲಿ ಹುಟ್ಟಿದರೂ ತಾವೀಗ ದುಷ್ಕೃತ್ಯಗಳನ್ನೇ
ಕೈಕೊಂಡಿರಿ. ಇನ್ನಾದರೂ ಲೋಕೋಕ್ತಿಯಂತೆ ನರೆಕೆನ್ನೆ ತೆರೆಗಲ್ಲಗಳ,
ಶರೀರಗೂಡು ಕಳಚಿಹೋದ ಮುನ್ನ ಹಲ್ಲು ಹೋಗಿ ಬೆನ್ನುಬಾಗಿ ಅನ್ಯರಿಗೆ
ಮಾರುಹೋಗದ ಮುನ್ನ, ಮುಪ್ಪಿನಿಂದೊಪ್ಪವಳಿದು ಮೃತ್ಯುವಿಗೆ ತುತ್ತಾ
ಗದ ಮುನ್ನ ಸತ್ಕೀರ್ತಿಯನ್ನುಳಿಸಿಕೊಳ್ಳುವುದು ಮೇಲು ನೋಡಿದರೆ ಸೀತೆ
ಯ ನೆವದಿಂದ ಕುಲವಳಿಯಿತು. ಯುದ್ಧವೊದಗಿ ಬಂಧುಬಾಂಧವರಳಿದರು.
ಆದ್ದರಿಂದ ಸೀತಾಮಾತೆಯನ್ನು ಶ್ರೀರಾಮನಿಗೊಪ್ಪಿಸಿರಿ! ಆತನ ಸೈನ್ಯದಲ್ಲಿ
ಶರಣಶ್ರೇಷ್ಠನಾಗಿ ನ್ಯಾಯಧರ್ಮಗಳಲ್ಲಿ ಪ್ರವೀಣನಾದ ವಿಭೀಷಣ ದೇವ
ನನ್ನು ಕರೆದು ತನ್ನಿರಿ! ಇದರಿಂದ ಉಳಿದ ಸೈನ್ಯ, ಐಶ್ವರ್ಯವೇ ಸಾಕು;
ಪ್ರಖ್ಯಾತಿ ಇದೆ. ಯಜಮಾನನ ದುರ್ನಡತೆಯಿಂದ ಕುಟುಂಬದವರೆಲ್ಲ

ಹಾಳುಬೀಳುವಂತೆ, ರಾಜನು ಮಾಡಿದ ಅನ್ಯಾಯದಿಂದ ಆ ರಾಷ್ಟ್ರವೆ, ಪ್ರಜೆ - ಪರಿವಾರ ಸರ್ವಸ್ವವೂ ನಾಶವಾಗುವುದೆಂದು ಹೇಳಬೇಕಾಗಿಲ್ಲ ಅಪ್ಪಾ! ಕೈಮುಗಿದು ಬೇಡುತ್ತೇನೆ. ಯುದ್ಧೋದ್ಯುಕ್ತನಾಗುವುದು ಬೇಡ.

ರಾವಣ:- ಮುಚ್ಚು ಬಾಯ್! ಪುತ್ರ ವಾತ್ಸಲ್ಯದಿಂದ ಈವರೆಗೆ ಸೈರಿಸಿದೆ. ಇನ್ನು ಶಾಂತಿಯಿಲ್ಲ. ಈಶ್ವರೀ ಶಕ್ತಿಯಿಂದ ನಡೆಯಲ್ಪಡುವ ಸೂರ್ಯಾದಿ ಗ್ರಹತಾರೆಗಳ, ಜಗತ್ತಿನ ಜೀವಕೋಟಿಗಳ ಸ್ಥಿತಿಗತಿ ನಾನರಿಯದವನೇ? ಸುಮ್ಮನೆ ತತ್ತ್ವೋಪದೇಶ ಮಾಡಲು ತೊಡಗಿರುವೆಯೂ! ಸಾಕುಮಾಡು.

ರಾಗ – ಭೈರವಿ | ಏಕ – ತಾಳ

ಅತಿಕಾಯನೆ ನೀಕೇಳು । ರಿಪು – ಮಥನಕೆ ಪೋಪಡೆ ಪೇಳು । ಕಥನದ ಮಾತಂತಿರಲಿ । ಪಶು – ಪತಿಯೂಹವ ಕೈತರಲಿ ||೧||

ರಾವಣ:- ತಿಳಿಗೇಡಿಯೇ ! ಅಲ್ಪಮಾನವರಿಗೆ, ಕ್ಷುದ್ರ ಕಪಿಗಳಿಗೆ ಹೆದರಿ ಲಂಕಾಧೀಶನಾಗಿರುವೆನೇ? ಕುಲಕ್ರಮಾಗತ ಧರ್ಮಕರ್ಮಗಳಿಂದ ಪ್ರಗತಿ ಪಡೆಯಬೇಕೆಂಬುದೇ ನನ್ನಿಚ್ಛೆ. ನೀನು ಸೂಚಿಸಿದಂತೆ ಆ ರಾಮನು ಮಹಾಮಹಿಮನಾಗಿದ್ದರೆ ಬಾಲ್ಯದಲ್ಲಿ ತಾಟಕಿಯನ್ನು ಕೊಂದು, ತಾರುಣ್ಯದಲ್ಲಿ ಶೂರ್ಪನಖಿಯ ಮಾನಭಂಗಮಾಡಿ, ವಾಲಿಯನ್ನು ಮೋಸದಿಂದಳಿಸಿ, ಭಾರ್ಯಾ ದುಃಖದಿಂದ ತೊಳಲುತ್ತಿರುವನೇ? ಹೇಗೊ ಯುದ್ಧಾರಂಭವಾಯಿತು. ಹಿಡಿದ ಕಾರ್ಯವನ್ನು ಕೊನೆಮುಟ್ಟಿಸುವುದೇ ಜಾಣರ ಕರ್ತವ್ಯ. ಹುಟ್ಟಿದವರಿಗೆ ಸಾವುಂಟೆಂಬುದು ನಿಶ್ಚಯವಿರುವಾಗ ಜ್ಞಾತಿಗಳೂ, ಬಂಧು ಬಾಂಧವರೂ ನನಗಾಗಿ ನಾಶಹೊಂದಿರುವಾಗ ಸಂಧಾನದ ಪ್ರಸ್ತಾಪವೇ ಇಲ್ಲ. ಶತ್ರು ಸಂಹಾರಕ್ಕೆ ಇಷ್ಟವಿದ್ದರೆ ಈಗಲೇ ಹೊರಡು ಇಲ್ಲವಾದರೆ ರಾಣಿವಾಸಕ್ಕೆ ನಡೆ ನನ್ನಲ್ಲಿ ಬ್ರಹ್ಮದೇವನ - ಪರಮೇಶ್ವರನ ಬಲೋಚಿತ್ಕಾರವೂ ದೇವಾಸುರರ ಬೆಂಬಲವೂ ಇರುವಾಗ ಯಾರಿಗೂ ಭಯಪಡುವಂತಿಲ್ಲ. ಒಂದೇ ಬಾರಿಗೆ ಹತ್ತು ಮುಖಗಳಿಂದ, ಹತ್ತು ವಿಧದ ಯೋಚನೆಮಾಡಿ ಇಪ್ಪತ್ತು ಕೈಗಳಿಂದ ಕೆಲಸ ನಡೆಸುವ ಸಾಮರ್ಥ್ಯವಿರುವಲ್ಲಿ ರಾಮನ ಮಾತಂತಿರಲಿ, ಪ್ರಳಯ ರುದ್ರನೇ ಆತನ ಸಹಾಯಕ್ಕೆ ಬಂದರೂ ಮುಂದಿಟ್ಟ ಹೆಜ್ಜೆಯನ್ನು ಎಂದಿಗೂ ಹಿಂದಿಡುವಂತಿಲ್ಲ. ತಿಳಿದೆಯೂ!

ಅತಿ:- ಅಪ್ಪಾ! ಸಿಟ್ಟುಮಾಡಬೇಡಿರಿ.

ರಾಗ - ಸಾಂಗತ್ಯ

ನಿನಗೆ ನಾಚಿಕೆಯೊದರೆ ನಗಾದರರುಹಯ್ಯ । ವನದೊಳಿದ್ದವಳ ಕೊಂಡೊಯ್ದು ॥ ಇನಕುಲಾಧಿಪಗಿತ್ತು ಈಗ ನಿಮ್ಮೊಳು ಮನ । ಮುನಿಸಿಲ್ಲದಂತೆ ಮಾಡುವೆನು ॥೧॥

ಅತಿ:- ಜನಕಾ! ಕೈಕೊಂಡ ಕಾರ್ಯ ಕಾರಣ ತಿಳಿಯಿತು. "ಜಾತಸ್ಯ ಮರಣಂ ಧ್ರುವಂ" ಎಂದಿದ್ದರೂ ಯುಕ್ತಾಯುಕ್ತ, ನ್ಯಾಯಾನ್ಯಾಯ ವಿಮರ್ಶೆಯಿಂದ ಕರ್ತವ್ಯ ನಡೆಸಬೇಕಲ್ಲವೇ! ಸತ್ಕೀರ್ತಿಯಿಂದ ಸ್ವಲ್ಪಕಾಲ ಬಾಳಿದರೂ ಸಾಕು. ಪರನಾರಿಯರ ನೋಟ ಪಾಪಕ್ಕೆ ಹೇತು. ಪರ ಸತಿಯರ ಕೂಟ ನರಕದ ಹೋರಾಟ, ಎಂಬ ಮಾತಿನಂತೆ ಮರಣಪಟ್ಟರೆ ಹೆಣ್ಣಿನ ನೆವನದಿಂದ ಮಣ್ಣು ಪಾಲಾದನೆಂಬ ಅಪಕೀರ್ತಿ ಹೊಂದಲಿಸಿ ಆದ್ದರಿಂದ ಮಾನವನಾದ ರಾಮನಿಗೆ ಪ್ರತಾಪಶಾಲಿಯಾದ ನಾನೇ ತಲೆಕಗ್ಗಿಸಲಾರೆನೆಂಬ ಸಂಕೋಚವಿದ್ದರೆ ಸೀತಾ ದೇವಿಯನ್ನು ನಾನೇ ಕರೆದೊಯ್ದು ಶ್ರೀರಾಮನ ಸನ್ನಿಧಿಗೆ ಒಪ್ಪಿಸಿಬಿಡುತ್ತೇನೆ. ನೀತಿ ವಾಕ್ಯಗಳನ್ನು ಹೇಳಿದ ತಮ್ಮ ಸಹೋದರ ಹಾಗೂ ನನ್ನ ಚಿಕ್ಕತಂದೆಯವರನ್ನು ಕೂಡಾ ಇಲ್ಲಿಗೆ ಕರೆತಂದು ನಿಮಗೂ ಶ್ರೀರಾಮನಿಗೂ ಇದ್ದ ದ್ವೇಷ ಭಾವಗಳನ್ನು ಶಾಂತಗೊಳಿಸಿ, ಅನ್ಯೋನ್ಯವಾಗಿರುವಂತೆ ಮಾಡಲಿರುತ್ತೇನೆ. ದಯೆಪಾಲಿಸಿರಿ,

ರಾವಣ:- ಏನೆಂದೆ? ಸೀತೆಯನ್ನು ಬಿಟ್ಟುಕೊಡುವುದೇ? ಛೇ, ಛೇ! ಎಂತಹ ಅಸತ್ಯದ ಮಾತಿದು?

ಕೊಡೆ ರಾಮಗೆ ಸೀತೆಯನು । ನಿಲು - ಗಡೆಯಿದು ತೊಟ್ಟ ಛಲವನು । ಬಿಡುವವನೇ ತಾನೆಂದು । ನೆಲ - ನೊಡೆವೋಲ್ ಕೂಗಿದನಂದು ॥೨॥

ರಾವಣ:- ಹೇ ಅಪ್ರಬುದ್ಧನೇ! ನಿನ್ನ ಮಾತು ಕೇಳಿದರೆ ಮೊದಲು ನಿರಾಶೆ, ಆ ಮೇಲೆ ದುಃಖ - ಸಂತಾಪ, ಕೊನೆಗೆ ಅಶಾಂತಿ - ಕ್ರೋಧಾಗ್ನಿಯೇ ಉಕ್ಕಿಬರುತ್ತಿದೆ. ಏಕೆಂದರೆ ನನ್ನ ಸರ್ವಾಧಿಕಾರಕ್ಕೆ, ಮಾನಾಭಿಮಾನಕ್ಕೆ ಕೊರತೆಯೇ ಸರಿ. ಸ್ವಭಾವತಃ ಈ ಸ್ವಾರ್ಥ ವೃತ್ತಿಯ ಪುರುಷತ್ವವಿದ್ದಿಲ್ಲವಾದರೆ ಹುಟ್ಟು ಸಾವುಗಳ ನಡುವೆ ಬಾಳಿ ಬದುಕುವ ಅಸ್ಥೆಯೇ ಇಂಲಿಲ್ಲ. ರಾಜನು ಯುದ್ಧಕ್ಕಿಳಿದಾಗ ಪ್ರತಿಯೊಬ್ಬನೂ ಸೈನಿಕನಾಗಬೇಕು. ದೇಶಾಭಿ

ಮಾನದಿಂದ, ನಿಸ್ವಾರ್ಥ ಬುದ್ಧಿಯಿಂದ ಇನ್ನೊಬ್ಬನಿಗೆ ಪ್ರೋತ್ಸಾಹಕನಾಗಿ ಕಾದಾಡಬೇಕು. ಅದನ್ನು ಮರೆತು; ನಾನು ಕೈಕೊಂಡ ಕಾರ್ಯವು ಅಧರ್ಮ, ಸರಿಯಲ್ಲೆಂದು ಸಾರುತ್ತಿರುವೆಯಲ್ಲಾ! ಏನು ಹುಚ್ಚು! ಜನಿಸಿದವನು ಒಂದಿನ ಅಳಿಯಲೇ ಬೇಕೆಂಬ ನಿಶ್ಚಯವಿರುವಾಗ ಲೋಕೈಕ ವೀರನಾದ ನಾನು ರಾಮನೊಡನೆ ಕಾದುವುದೇ ಧರ್ಮವಲ್ಲದೆ ಸೀತೆಯನ್ನು ಖಂಡಿತ ಬಿಟ್ಟುಕೊಡಲಾರೆ. ಇದು ನನ್ನ ನ್ಯಾಯಬದ್ಧ ಛಲವಾಗಿದೆ. ಅತಿಕಾಯ! ಹುಟ್ಟಿದ ವಂಶ, ಜಾತಿ ಪದ್ಧತಿ, ದೇಶ ರಕ್ಷೆ, ರಾಜಶಾಸನದ ಗುರಿಯೇನೆಂಬುದನ್ನು ನೀನೇ ಗ್ರಹಿಸುವಂತನಾಗು!

ರಾಗ – ಕಾಂಭೋದಿ | ತಾಳ - ಝಂಪೆ

ಅಹುದು ಮತ್ತೇನಾರ ಚಿತ್ತದಲಿ ಗ್ರಹಿಸಿಕೊಂ | ಡಿಹುದನವರೇ ಬಲ್ಲರೆನುತ || ಸಹಜವೈಷ್ಣವರೆರೆಯನತಿಕಾಯನುಬ್ಬಿ ಸ | ನ್ನಿತನಾದನು ಸಮರ ಕಂದೂ ||೧||

ಅತಿಕಾಯ:– (ಸ್ವ) ಜನರ ಸುಖಭೋಗಕ್ಕೆ ಅಗತ್ಯವಾದ ದ್ರವ್ಯಾರ್ಜನೆಯ ವಿಧಾನವನ್ನು ಅರ್ಥಶಾಸ್ತ್ರವು ವಿವರಿಸುತ್ತದೆ. ರಾಜ್ಯಶಾಸ್ತ್ರವು ರಾಜ್ಯ ವಿಸ್ತರಣೆಯ ತಂತ್ರೋಪಾಯಗಳನ್ನೂ, ಸಮಾಜ ಶಾಸ್ತ್ರವು ಸಮಾಜ ರಚನೆಯ ಕ್ರಮಗಳನ್ನೂ, ಆಯುರ್ವೇದವು ಶರೀರಕ್ಕೆ ಬೇಕಾದ ಆರೋಗ್ಯ ಸೂತ್ರಗಳನ್ನೂ ಬೋಧಿಸುವುದು. ಹೀಗೆ ನಾನಾಶಾಸ್ತ್ರಗಳನ್ನೋದಿದ ನಮ್ಮ ಜನರು ತಮಗೊಪ್ಪುವ ಕರ್ತವ್ಯಗಳನ್ನೆಸಗುತ್ತಿರುವಾಗ ಅವರವರ ಮನೋಭಾವಗಳೆಂತಿರುವವೋ ತಿಳಿಯದು "ಯದ್ಭಾವಂತದ್ಭವತಿ" ಎಂಬ ನೀತಿ ಸೂಕ್ತಿಗೆ ಸರಿಯಾದ ಫಲವನ್ನು ಅವರೇ ಅನುಭವಿಸುವರು. ಆದರೆ ಎಲ್ಲಕ್ಕಿಂತ ಮೇಲಾದ ಮೋಕ್ಷಶಾಸ್ತ್ರದಂತೆ ನಡೆಯುವವರು ವಿರಳ. ಆದರಂತೆ ನಾನೀಗ ಯುದ್ಧಕ್ಕೆ ಹಿಂದಾಗಿ ಜನಾಪವಾದಕ್ಕೆ ಗುರಿಯಾಗುವ ಬದಲು ಶ್ರೀರಾಮನೊಡನೆ ಕಾದಾಡಿ ದಿವ್ಯಾಸ್ತ್ರಗಳಿಂದಳಿದರೆ ಸಂಸಾರ ದುಃಖದಿಂದ ಪಾರಾಗಿ ಶಾಶ್ವತವಾದ ಮೋಕ್ಷ ಸುಖವನ್ನು ಪಡೆಯಬಹುದು. ಹಾಗಾದರೆ ಪುತ್ರರು ಸಲಿಸಬೇಕಾದ ಋಣಬಾಧೆಯು ಪರಿಹಾರವಾಗಿ, ಕೀರ್ತಿಕಾಯದಿಂದುಳಿದು ಸದ್ಗತಿಯುಂಟಾಗುವುದು. ಆದಕ್ಕಾಗಿ ಈಗಲೇ ಯುದ್ಧಕ್ಕಣಿಯಾಗಿ ತಂದೆಯ ಇಷ್ಟಾ ಪೂರ್ತಿಯಾಗುವಂತೆ ನಡೆದುಕೊಳ್ಳು,

ವೆನು. ತಂದೆಯವರೇ! ವಿಜ್ಞಾಪಿಸುತ್ತಿದ್ದೇನೆ.

ಜೀಯತಾಸಂಗರಕೆ ವೀಳಯವನೆನುತಲತಿ । ಕಾಯನುಸುರಲ್ಕೆ ರಾಕ್ಷಸನ ॥ ರಾಯನಾತನಿಗೆಪೊಂಬಟ್ಟಲಲಿ ವೀಳೆಯವ । ಪ್ರೀಜಂದಲಿ ಕೊಟ್ಟು ಕಳುಹಿದನು ॥೨॥

ಅತಿ:– ತಾತಯ್ಯನವರೆ! ತಾವೇನೂ ತಿಳಿಯದವರಲ್ಲ. ಸೀತಾಮಾತೆಯ ನಿಮಿತ್ತವಾಗಿ ಲಂಕೆಯ ಸೌಭಾಗ್ಯವೇ ಕುಂದುವಂತಾಯಿತು. ಮೊದಲು ಸೀತೆಯೊಬ್ಬಳೇ ಕಣ್ಣೀರು ಸುರಿಸುತಿದ್ದರೆ ಈಗ ಸಾವಿರಾರು ಪತಿವ್ರತೆಯರು ತಲೆಕೆದರಿಕೊಂಡು ರಣಕಣದಲ್ಲಿ ಬಿದ್ದ ಪುರುಷರೊತ್ತಿಗೆ ಕಣ್ಣೀರುದುಂಬಿ ಹೊರಳಾಡುವ ದೃಶ್ಯವು ಕಣ್ಣಾರೆ ಕಾಣುವಂತಾಗಿದೆ. ನೋಡಿದರೆ ಆಕಾಶದಲ್ಲಿ ಧೂಮಕೇತು– ಬಾಲಕೇತುಗಳು ಓಡಾಡುತ್ತಿರುವುವು. ನರಿ ನಾಯಿಗಳು ರಾಜಬೀದಿಗಳಲ್ಲಿ ಬೊಬ್ಬಿಡುತಿದ್ದಾವೆ. ಗಜ ಹಯಾದಿ ವಾಹನಗಳು ಕಣ್ಣೀರು ಸುರಿಸುತ್ತಿರುವುವು. ಇಂತಹ ಅಶುಭ ಸೂಚನೆಗಳನ್ನರಿತು ಕೆಲವು ಮಾತುಗಳನ್ನಾಡಿದೆ. ಕೋಪಿಸಿಕೊಳ್ಳಬೇಡಿ. ನೀವು ತೊಡಗಿದ ರಣಯಜ್ಞಕ್ಕೆ ನೆರವಾಗಿ ಸನ್ನದ್ಧನಾಗಿ ನಿಂತಿರುವೆನು. ರಣವೀಳ್ಯಕೊಟ್ಟು ಕಳುಹಿಸೋಣಾಗಲಿ! ಏನಪ್ಪಣೆ?

ರಾವಣ:– ಶಹಭಾಸ್! ಹೀಗಿರಬೇಕು ವೀರವರ್ತನೆ. ಕಾಲಾಧೀನವಾದ ಪ್ರಪಂಚದಲ್ಲಿ ಕೀರ್ತಿವಂತನಾಗಿ ಬಾಳಬೇಕಲ್ಲದೆ ರಣಹೇಡಿಯಾಗಿ ಬದುಕಿದರೆ ಏನುಫಲವಿದೆ. ರಾಮಲಕ್ಷ್ಮಣರನ್ನು ಗೆದ್ದು ಜಯಶಾಲಿಯಾಗಿ ಬರುವಂತಹನಾಗು! ರಣವೀಳ್ಯವನ್ನು ಪೊಂಬಟ್ಟಲದಲ್ಲಿಟ್ಟು ಕೊಟ್ಟಿರುವೆನು. ಹೋಗು, ಹೋಗು!

ಅತಿ:– ತಂದೆಯವರು ಕೈಕೊಂಡ ಯುದ್ಧ ಸಾಧನದಿಂದ ನನ್ನೀ ರಾಕ್ಷಸಜನ್ಮವು ಸಾರ್ಥಕವಾಯಿತು. ಇನ್ನು ಸಂಗ್ರಾಮಕ್ಕೆ ಹೊರಡುವ ಮುನ್ನ ನಾನು ಮಾಡಬೇಕಾದ ಕರ್ತವ್ಯವೊಂದಿದೆ. "ಮಾತೃ ದೇವೋಭವ, ಪಿತೃ ದೇವೋಭವ" ಎಂಬ ಉಪನಿಷದ್ ವಾಕ್ಯದಂತೆ ಸರ್ವಶ್ರೇಷ್ಠಳಾದ ಮಾತೃ ದೇವತೆಯ ಪಾದಾರವಿಂದಕ್ಕೆರಗಿ ಆಶೀರ್ವಾದ ಪಡೆಯಬೇಕಾದುದು ಅತ್ಯಗತ್ಯ. ಇಲ್ಲವಾದರೆ ನನ್ನ ಶ್ರೇಯಸ್ಸಿನ ವೃಕ್ಷಮೂಲಕ್ಕೆ ಕೊಡಲಿಯಿಟ್ಟಂತಾಗುವುದು. ಅಭಿವೃದ್ಧಿಯ ತಾರಕೆಯೇ ನೆಲಕ್ಕುರುಳೀತು. ಅಮ್ಮಾ! ತಮ್ಮ

ಪಾದಕ್ಕೆ ಸಾಷ್ಟಾಂಗ ಪ್ರಣಾಮಗಳು.

ಧಾನ್ಯಮಾಲಿನಿ:- ಮಗನೇ! ಆಯುಷ್ಮಂತನಾಗು! ಏನು ವಿಶೇಷ?

ರಾಗ- ॥ ತ್ರಿವುಡೆ-ತಾಳ.

ತಾಯೆ ಯೆನ್ನಯ ಕಾಮಿತವ ನಿನ । ಗೀಗ ಒರೆಯುವೆ ಲಾಲಿಸು । ಆಯತಾಕ್ಷಿಯ ಕೊಡೆನು ಎನ್ನುತ । ಪಾಯುವ ಗೈದನು ಕಲಹವ । ಜನಕ ನಿಂದು ॥೧॥

ಅತಿ:- ಜನನಿಯೇ! ಪಾದಾತನಾಗಿ ಬಿನ್ನವಿಸುತ್ತೇನೆ. ಲಾಲಿಸಬೇಕು ಜಗತ್ತಿನಲ್ಲಿ ಕಲಹವುಂಟಾಗಬೇಕಾದರೆ ಹೆಣ್ಣು, ಹೊನ್ನು, ಮಣ್ಣು, ಜ್ಞಾತಿ ದ್ವೇಷ ಮತ್ತು ತಪ್ಪುಮಾಡುವುದೆಂಬ ಐದು ಕಾರಣಗಳಿವೆ. ಅವುಗಳಲ್ಲಿ ಸ್ತ್ರೀ ನಿಮಿತ್ತವಾದ ಕಲಹವೇ ಮೂಲವಾಗಿ ನಮ್ಮಿರಾಕ್ಷಸಾನ್ವಯವು ವಿನಾಶವಾಶವಾಗುವ ಕಾಲವೊದಗಿದೆ. ಹಾಗಾದರೂ ನಮ್ಮ ತಂದೆಯವರು ತಾನು ತಂದ ಸೀತಾಮಾತೆಯನ್ನು ಬಿಟ್ಟುಕೊಡಲಾರೆನೆಂಬ ದುಶ್ಛಲದಿಂದ ಹೋರಾಟಕ್ಕಿಳಿದಿರುತ್ತಾರೆ.

ಧಾನ್ಯ:- ಈ ವೇಳೆ ನಿನ್ನ ಯೋಚನೆಯೇನು?

ಆದುರಾಗ್ರಹಕಿಂದು ಜನಕನು । ಕಾದಿ ಜಯವನು ಪಡೆವರೆ ॥ ಸಾದರದಿ ಪೋಗುವುದ ಕಾಣುತ । ಪಾದಕೊಂದಿಸಿ ಪೊರಟೆನು । ಯುದ್ಧಕಿಂದು ॥೨॥

ಅತಿ:- ಇಂದು ನಮ್ಮ ತಂದೆಯವರು ಹತ್ತು ತಲೆಗಳಲ್ಲಿ ಹತ್ತು ಕಿರೀಟ, ಇಪ್ಪತ್ತು ಕೈಗಳಲ್ಲಿ ಇಪ್ಪತ್ತಾಯುಧಗಳನ್ನಾಂತು, ಜಯಬೇರಿ ಹೊಯ್ಸಿ ಕಾಳಗಕ್ಕೆ ಹೊರಟಿರುವರಮ್ಮಾ! ಆಗ ನಾನಾಗಿಯೇ ಇದಿರು ಬಂದು ಈಕಾಳಗ ನ್ಯಾಯವಲ್ಲವೆಂಬ ನೀತಿವಾಕ್ಯಗಳನ್ನು ಸಾರಿದೆ. ಆಗ ಮನಶ್ಶಾಂತಿಯಿಲ್ಲದೆ ಸಿಟ್ಟಾಗಿ ಗದರಿದ ಕಾರಣ ಆ ಯುದ್ಧಕ್ಕೆ ನಾನೇಅಣಿಯಾಗಿ ಅನುಜ್ಞೆ ಪಡೆದು ಹೊರಟುಬಂದಿರುತ್ತೇನೆ. ಮುಂದಾಗುವ ಜಯಾಪಜಯ ದೇವೇಚ್ಛೆ ಭವಿಷ್ಯವನ್ನು ನಿರ್ಧರಿಸುವವರಾರು? ಅಮ್ಮಾ! ಹರಸಿ ಕಳುಹಿಸಬೇಕೆಂತೆ ಕೈಮುಗಿದುಪ್ರಾರ್ಥಿಸಿಕೊಳ್ಳುತ್ತೇನೆ.

ಧಾನ್ಯ:- ಸುಕುಮಾರ! ದುಡುಕುವೆಯೇಕೆ?

ರಾಗ-ಜುಂಜೋಟಿ। ಏಕ ತಾಳ

ಅತಿಕಾಯನೆಂದುಕೇಳಿ ಮ । ತ್ತವನ ಜನನಿಪೇಳ್ದಳು । ಅತಿದುಃಖ

ದಿಂದ || ಸತಿಯುಸೇವನದಿಂದ ಕೊಲಲ್ಪುಬಂದಿಹ ನರ | ನಾಥನೊಳುಯುದ್ಧ ಥರವೇನೊ ಕಂದ ||೧||

ಧಾನ್ಯ:- ಮಗನೇ! ನೀನೊಬ್ಬ ಮಹಾಶೂರ, ವೀರಾಧಿವೀರ ನಹುದು. ಆದರೆ ಸೂರ್ಯವಂಶದಲ್ಲಿ ಹುಟ್ಟಿದ ರಾಮಭದ್ರನು ದುರ್ಜನರನ್ನು ತಿದ್ದಿ ಸಜ್ಜನರನ್ನುದ್ಧರಿಸಿ ಧರ್ಮಸ್ಥಾಪನೆಗಾಗಿ ಜನ್ಮವೆತ್ತಿರುವನೆಂದು ಲೋಕವೇ ಸಾರುತ್ತಿದೆ. ಹೀಗಿರುವಾಗ ಜಗದಾದಿದೈವದೊಡನೆ ನೀನು ಹೂಡುವ ಸಮರ ಸಮಂಜಸವಾದೀತೇ? ಸೂರ್ಯನಮುಂದೆ ಪತಂಗದಾಟವು ಹೇಗಾಗುವುದೋ ನೀನೇ ಹೇಳು.

ಅತಿ:- ತಾಯೇ! ಸಮಾಜಪಾಲನೆಯ ಕರ್ತವ್ಯ ಕಟ್ಟಿಕೊಂಡಾಗ ಅನ್ಯರಿಂದೊದಗುವ ಹಾನಿಯನ್ನು ಸಹಿಸಲು ಸಾಧ್ಯವೇ? ದೇಶೋದ್ಧಾರ, ಆತ್ಮೋದ್ಧಾರ ಆಗಬೇಕೆಂದೇ ಜನಕನ ಸಂಕಲ್ಪ; ವಿಕಲ್ಪವಾಗುವುದೇ?

ಎಷ್ಟು ಹೇಳಿದರೇನು ಕಷ್ಟದಿಂರೆ ನಾನು | ಕೆಟ್ಟಯೋಚನೆಯಾಯ್ತು | ಶ್ರೇಷ್ಠರಿಗಿಂದು || ದುಷ್ಟೆ ದುರ್ಮತಿ ನಾನು ಹುಟ್ಟಿದ ಮಗನನ್ನು | ಬಿಟ್ಟು ಬಾಳಿರಲಿಂತು ಸೃಷ್ಟಿಯೊಳಿಂತು || ೨ ||

ಧಾನ್ಯ:- ಕುಮಾರ! ಏನೂ ತಿಳಿಯದವರಿಗೆ ತಿಳಿಸುವುದು ಸುಲಭ. ತಿಳಿದೂ ತಿಳಿಯದಂತೆ ನಡೆಯತಕ್ಕವರಿಗೆ ಸರಿಯಾದ ನೀತಿ ಹೇಳಲು ಬ್ರಹ್ಮನಿಂದಲೂ ಶಕ್ಯವಿಲ್ಲ. ವಿವೇಕಿಯಾಗತಕ್ಕ ರಾಜನೇ ಅವಿಚಾರಿಯಾದರೆ ಹೇಳುವುದೇನನ್ನು? ಅಯ್ಯೋ! ಪರಮಾತ್ಮನಿಗೆ ವಿರೋಧವಾಗಿ ಹೆಣಗಾಡಿದರೆ ಜಯವಾಗುವುದುಂಟೇ? ದುಷ್ಟೆಯಾದ ನಾನು ಹುಟ್ಟಿದ ಮಗನನ್ನೇ ಕಳಕೊಂಡು ನಿರ್ಭಾಗ್ಯೆಯಾಗಿ ಬದುಕಬೇಕಾಯಿತಲ್ಲಾ! ನವಮಾಸ ಹೊತ್ತು, ಹೆತ್ತು, ಸಾಕಿ ಸಲಹಿದ ಈ ಕರುಳು ಹೇಗೆ ಸಹಿಸುವುದೊ ಶಿವನೇ ಬಲ್ಲ.

ಅತಿ:- ದೇವಿ! ಮರುಗಬಾರದು.

|| ಭಾಮಿನಿ ||

ಜನನಿ ಮರುಕವ ತಾಳದಿರು ನಾ | ನನುವರದಿ ಈ ದೇಹವನು ತಾ | ಚಿನುಮಯಂಗರ್ಪಿಸಿಯೆ ಸಾರ್ಥಕಗೈವೆನೀಜನುಮ ||

ಅತಿ:- ಜನನಿ! ನನ್ನ ಯುದ್ಧ ಸಿದ್ಧತೆಯನ್ನರಿತೊಡನೆ ಈ ರೀತಿ ಮರುಗುವುದೇ? ಹುಟ್ಟುಸಾವೆಂಬುದು ಕಟ್ಟಿಟ್ಟ ಗಂಟು. ವಿಧಾತೃನು ಜನ್ಮ

ಕಾಲದಲ್ಲಿ ವಿಧಿಸಿದ ವಿಧಿಸಂಕಲ್ಪವನ್ನಾರು ಮೀರುವವರು? ದೈವವನ್ನು ಪುರುಷಪ್ರಯತ್ನಗಳಿಂದ ಗೆಲ್ಲುವುದಕ್ಕೆ ಹೇಗೆ ಸಾಧ್ಯ? ಪ್ರಾಜ್ಞರಾದವರು ಮಿಂಚಿನ ಬಳ್ಳಿಯಂತೆ ಹೊಂಚುತ್ತಿರುವ ಭೌತಿಕ ದೇಹಕ್ಕಾಗಿ ವ್ಯಸನಗೊಳ್ಳದೆ ಮೋಕ್ಷ ಸುಖವನ್ನೇ ಚಿಂತಿಸುತ್ತಿರುವರು. ಹಾಗೆ ಈ ದೇಹವನ್ನು ಆಸೆಯಿಲ್ಲದೆ ಚಿನುಮಯಾತ್ಮಕನ ಪಾದಕ್ಕೊಪ್ಪಿಸಿ ಸಫಲನಾಗಬೇಕೆಂಬ ಸದುದ್ದೇಶವೇ ನನ್ನದು.

ಮನದಿ ಯೋಚಿಸಬೇಡ ಸುಖದಿಂ। ದಿರುಯೆನುತ ಸಂತೈಸಿ ಬಳಿಕಾ ।
ಮನುಮಥಾರಿಯ ನೆನೆದು ಪೊರಟನು ಅನುವರಕ್ಕಂದು ॥೧॥

ಅತಿ:- ವೀರಮಾತೆಯೇ! ಈ ಪ್ರಪಂಚದಲ್ಲಿ ದ್ವಂದ್ವವಾಗಿರುವ ಸುಖದುಃಖವೋ, ಲಾಭ ನಷ್ಟವೋ, ಜಯಾಪಜಯವೋ, ಜನನ ಮರಣವೊ ನಿಗ್ರಹಾನುಗ್ರಹವೋ ಏನೇ ಇರಲಿ. ಕಾರಣವೇ ತಿಳಿಯದಂತೆ ಕಾರ್ಯಗಳಾದರೆ ದೈವಾಧೀನವೆಂದು ಭಾವಿಸಬೇಕು. ಆದಕಾರಣ ಹಾಸಿಗೆಯ ಮೇಲೆ ಮಲಗಿ ಪ್ರಾಣಬಿಡುವುದಕ್ಕಿಂತ ರಣರಂಗದಲ್ಲಿ ವೀರಶಯ್ಯೆಯ ಮೇಲೆ ಮರಣಹೊಂದುವುದೇ ಶ್ರೇಯಸ್ಸೆಂದು ಗ್ರಹಿಸಿರುತ್ತೇನೆ. ಅನುಗ್ರಹಿಸಬೇಕು! ಈ ಹರಣವನ್ನು ಶ್ರೀ ರಾಮಪರಬ್ರಹ್ಮನ ಚರಣದೆಡೆಯಲ್ಲಿ ಸಮರ್ಪಣ ಮಾಡುವುದಕ್ಕೆ ಅನುಕೂಲವಾಗುವಂತೆ ಆಶೀರ್ವದಿಸು. ಇದುಹೇ ಕೊನೆಯ ಬೇಡಿಕೆ.

ಧಾನ್ಯ:- ಮಗನೆ! ಭಕ್ತ ರಕ್ಷಕನಾದ ಶ್ರೀ ರಾಮನು ಅನುಗ್ರಹಿಸುವನು. ಹೋಗು. ಶುಭವಾಗಲಿ.

ರಾಗ-ಕಾಂಬೋದಿ । ಝಂಪೆ-ತಾಳ

ತರಿಸಿ ಕುಳಸಿಯ ದಂಡೆಯನು ಕೊರಳೊಳಾಂತೂರ್ಧ್ವ । ವರತ್ರಿಪುಂಡ್ರವ ಫಣೆಗೆ ರಚಿಸಿ ॥ ಸರಸದಿಂ ರಾಮನಡಿದಾವರೆಯಸ್ಮರಿಸುತ್ತಾ । ಪೊರಟನತಿಕಾಯ ಸಾಹವಕೆ ॥೧॥

ಅತಿ:- (ಸ್ವ) ನನ್ನ ಜೀವನದಲ್ಲಿ ಇದೇ ಸುದಿನ. ಸಂಗ್ರಾಮದ ನಿಮಿತ್ತವಾಗಿ ಶ್ರೀ ರಾಮನ ದಿವ್ಯ ದರ್ಶನದಿಂದ ಕೃತಾರ್ಥನಾಗುವ ಶುಭ ದಿನವೇ ಇದು. ಆದಕ್ಕಾಗಿ ಲಲಾಟದಲ್ಲಿ ಊರ್ಧ್ವ ತ್ರಿಪುಂಡ್ರವನ್ನೂ, ದ್ವಾದಶಾಂಗಗಳಲ್ಲಿ ಶಂಖಚಕ್ರಾದಿ ಮುದ್ರೆಯನ್ನೂ, ಶಿರದಲ್ಲಿ ತುಲಸೀ ಮಾಲೆಯನ್ನೂ

ಕೊರಳಲ್ಲಿ ನಾನಾ ಆಭರಣಗಳನ್ನೂ ಧರಿಸಿದಂತಾಯಿತು. ಇಷ್ಟ ದೇವತಾ ಪ್ರಾರ್ಥನೆಮಾಡಿ ಯುದ್ಧ ಕವಚ, ಶಿರಸ್ತ್ರಾಣ, ಮಣಿಕಿರೀಟ, ಬತ್ತಳಿಕೆ ಶಸ್ತ್ರಾಸ್ತ್ರಗಳೇ ಮೊದಲಾದ ಯುದ್ಧ ಸನ್ನಾಹಗಳನ್ನು ಸಿದ್ಧಗೊಳಿಸಿದಂತಾಯಿತು. ಓಹೊ! ರಣವಾದ್ಯಗಳು ಘೋರ್ಗರೆಯುತ್ತಿವೆ. ವಂದಿ, ಮಾಗಧ, ಸೂತ, ವೈತಾಳಿಕರೇ ಮೊದಲಾದ ಸ್ತುತಿಪಾಠಕರು ಹೊಗಳತೊಡಗಿದ್ದಾರೆ. ಸಾರಥಿಗಳೇ! ರಾಹು ಚಿಹ್ನೆಯು ಪತಾಕೆಯಿಂದೊಪ್ಪುವ ಮಣಿಮಯರಥವು ಮುಂದೆ ಬರಲಿ! ಇದೇನು ಸಂಭ್ರಮ? ಸಮುದ್ರದ ತೆರೆಗಳೇ ಎದ್ದು ಬಂದಂತೆ ರಾಕ್ಷಸರ ಹಿಂಡೇ ಹಿಂಡುಗಟ್ಟಿ ಬರುತ್ತಿವೆ. ಸರ್ವರಿಗೂ ಮಹೋತ್ಸಾಹ ಹುಟ್ಟುವಂತೆ ನನ್ನ ಮನೋಭಿಪ್ರಾಯಗಳನ್ನು ವ್ಯಕ್ತಗೊಳಿಸಬೇಕಾಗಿದೆ. ಸೈನಿಕರೇ! ಕೇಳಿರಿ.

ಬನ್ನಿರೈ ಸಂಸಾರ ಶರಧಿಯನು ದಾಟುವರು । ಬನ್ನಿರೈ ಮೋಕ್ಷಕಾಮಿಗಳು ॥ ಬನ್ನಿರೈ ಬಹಳ ಪದವಿಯನು ಬಯಸುವ ಭಟರು । ಬನ್ನಿರೆನ್ನೊಡನೆನುತ ಕರೆದ ॥೨॥

ಅತಿ:- ಲಂಕಾ ನಿವಾಸಿಗಳೇ! ಯುದ್ಧಾತುರವುಳ್ಳ ಸೈನಿಕರೇ ಬನ್ನಿರಿ. ಇಂದಿನ ಕಾಳಗಕ್ಕಾಗಿ ನನ್ನೊಡನೆ ಬರುವಿರಾದರೆ ನನ್ನೀ ಹಿತೋಕ್ತಿಗಳನ್ನು ಕಿವಿಗೊಟ್ಟು ಕೇಳಿರಿ. ಶರಧಿಯಂತಹ ಸಂಸಾರದಲ್ಲಿ ತಾಪತ್ರಯವೆಂಬ ಕಾಸಾರದಲ್ಲಿ ಹುಟ್ಟುಸಾವುಗಳೆಂಬ ಭವಚಕ್ರದಲ್ಲಿ ಸಿಕ್ಕಿ ಬಳಲುವಂತವರಿಗೆ ಈ ಮಾತು ಪಥ್ಯವಾಗದು. ಆದರೂ ಕೇಳಿರಿ. ತಮ್ಮ ಹೆಂಡತಿ, ಮಕ್ಕಳು, ಮನೆಮಾರುಗಳಲ್ಲಿ ಆಶೆಪಟ್ಟು, ಪಶುಗಳಂತೆ ನಿದ್ರಾಹಾರ ಭಯಮೈಥುನಗಳಲ್ಲಿ ಆಸಕ್ತರಾದವರು ಯಾರೂ ಬರಬೇಕಾಗಿಲ್ಲ. ಕಾಲನೆಂಬ ಸೂಪಕಾರನು ಆಶೆಯು ಕಟಾಹದಲ್ಲಿ ಜೀವಜಾಲಗಳನ್ನು ಕೆಡಹಾಕುವನು. ಋಣರೂಪೀ ಸಂಸಾರವು ನಶ್ವರವಿದ್ದು ಕ್ಷಣಿಕ ಬಾಳುವೆಯಲ್ಲಿ ಏನು ಸುಖವಿದೆ? ಪರಲೋಕದ ಮೋಕ್ಷ ಸುಖವು ಇಲ್ಲಿಗಿಂತ ಎಷ್ಟೋ ಅಧಿಕವೆಂಬ ವಿಚಾರವುಳ್ಳವರು ಮಾತ್ರ ಒಂದಾಗಿ ಬನ್ನಿರಿ. ಅಂತಹ ಮುಕ್ತಿದಾಯಕನಾದ ಶ್ರೀರಾಮನು ನಮ್ಮಲ್ಲಿಗೆ ಬಂದಿರುತ್ತಾನೆ. ಆತನಲ್ಲಿ ಸೆಣಗಾಡಿ ಮಡಿದರೆ ಮೋಕ್ಷ ಸಾಮ್ರಾಜ್ಯವು ಸುಲಭದಿಂದ ಲಭ್ಯವಾಗುವುದು. ಆದ್ದರಿಂದ ಯಾರಯ್ಯಾ ಸಂಸಾರ ದಾಟತಕ್ಕವರು! ಮೋಕ್ಷಕಾಮಿಗಳಾರಿದ್ದಾರೆ?

ಯಾರಿಗೆ ಬೇಕು ಸುಖಪ್ರದ ಪದವಿಗಳು? ಅಂತಹಕಾಂಕ್ಷೆಗಳೆಲ್ಲ ಪ್ರಾಪ್ತಿಸು ವುದಕ್ಕೆ ಇದೇ ಸುಸಂದರ್ಭ. ತಪ್ಪಿದರೆ ಸಾವಿರ ವರ್ಷವಾದರೂ ಸಿಗಲಾರದು. ಈ ಮಾತು ಸತ್ಯ, ಬ್ರಹ್ಮಜ್ಞಾನವು ಅಡಕವಿದೆ. ಸುಭಟಾಗ್ರಣಿಗಳೇ! ನನ್ನ ಜತೆಯಲ್ಲೇ ಬನ್ನಿರಿ. ಬಂದರೆ ಇಲ್ಲಿಗಿಂತ ನೂರು ಪಾಲಷ್ಟು ಹೆಚ್ಚಾದ ಸುಖ ಸಂಪತ್ತನ್ನು ಅಲ್ಲಿ ಪಡೆಯುತ್ತೀರಿ. ಶ್ರೀರಾಮನಾಣೆಯಾಗಿ ಹೇಳುತ್ತೇನೆ.

ಈಶನಾಗುವಡೆ ಕಮಲಾಸನನ ಪದವ। ನಾಯಾಸವಿಲ್ಲದೆ ಸುಲಭ ದಿಂದ ॥ ಕೇಶವನ ಕೂಡುವಡೆ ಬನ್ನಿರೆನ್ನೊಡನೆನುತ। ಹೊಯ್ಸಿದನು ಡಂಗು ರವನವನು ॥

ಅತಿ:– ಸೈನಿಕರೇ! ತರಗೆಲೆಮೆದ್ದು ತಪವಿದ್ದರೂ ಗಾಳಿಯನ್ನು ಸೇ ವಿಸಿ ಗಿರಿಗುಹೆ ಹೊಕ್ಕರೂ ಬಿಡದು ಈ ಮಾಯೆ. ತನುವಿನ ವ್ಯವಹಾರ ಮನದಲ್ಲಿ ವ್ಯಾಕುಳವಾಡಿತ್ತು ಮಾಯೆ. ಹೀಗೆ ಪರಿಪರಿಯಾಗಿ ಘಾತಿಸುವಂ ತಹ ಮಾಯಾಬಲವನ್ನು ಜೈಸಬೇಕಾದರೆ ನನ್ನೊಟ್ಟಿಗೆ ಬನ್ನಿರಿ. ನಿಮ್ಮ ನಿಮ್ಮ ಭಾವಕ್ಕೊಪ್ಪುವಂತಹ ರೂಪದಲ್ಲಿ ಆ ಪರಮಾತ್ಮನೊಲಿದು, ತಮಗೆ ಬೇಕಾದ ಪದವಿಗಳನ್ನು ಸಕಾಲಕ್ಕೆ ಒದಗಿಸುತ್ತಾನೆ. ಅದಕ್ಕಾಗಿ ಸಂಸಾರ ಬಿಟ್ಟು ಕಾಂತಾರಕ್ಕೆ ಹೋಗಿ ತಪಮಾಡಬೇಕಾಗಿಲ್ಲ. ಯಜ್ಞಯಾಗಗಳನ್ನೂ, ತೀರ್ಥಕ್ಷೇತ್ರಗಳ ಯಾತ್ರೆಯನ್ನೂ ನಡೆಸಬೇಕಾಗಿಲ್ಲ. ಎಷ್ಟೋಕಾಲ ತಪಸ್ಸು ಮಾಡಿ ಅಜಭವಾದಿಗಳನ್ನು ಮೆಚ್ಚಿಸಬೇಕಾಗಿಲ್ಲ. ನಮ್ಮಲ್ಲಿಗೆ ಸ್ತ್ರೀ ನಿಮಿತ್ತ ವಾಗಿ ಬಂದಿರುವ ದೇವಾದಿದೇವನನ್ನು ಕಂಡರೆ ಸಾಕು. ಪರಲೋಕದ ಲ್ಲಿಪ್ಪುದು ಇಲ್ಲಿಗಿಂತ ಅಧಿಕಾಧಿಕವಾದ ಸುಖಭೋಗಗಳನ್ನನುಭವಿಸಬಹುದು. ಈಗ ನರನಾಗಿ ಕಂಡರೂ ಆದಿಪುರುಷನಾದ ಶ್ರೀರಾಮನು ಅಹಲ್ಯೋದ್ಧಾ ರಕನಾಗಿ, ಜಟಾಯುವಿಗೆ ಪುಣ್ಯಪದವನ್ನಿತ್ತು ಶಬರಿಯ ಭಕ್ತಿಗೆ ಮೆಚ್ಚಿ, ಒಂದೇ ಬಾಣದಿಂದ ವಾಲಿಯನ್ನು ಕೊಂದು, ಸುಗ್ರೀವನಿಗೆ ಕಿಷ್ಕಿಂಧೆಯ ಪಟ್ಟವನ್ನೂ, ವಿಭೀಷಣದೇವನಿಗೆ ಲಂಕಾಧಿಪತ್ಯವನ್ನೂ ಅನುಗ್ರಹಿಸಿರು ವನು ಆದ್ದರಿಂದ ನಿಮ್ಮಭೀಷ್ಟಗಳೇನು? ಚತುರ್ವಿಧ ಮುಕ್ತಿ ಬೇಕೇ? ಈಶತ್ವವನ್ನಾಗಲಿ, ಬ್ರಹ್ಮನ ಪದವನ್ನಾಗಲಿ ಹೊಂದಬೇಕೆ? ಕೇಶವನ ಶರ ಣಕೋಟಿಗಳ ಕೂಟದಲ್ಲಿರಬೇಕೆ? ಎಲ್ಲ ಪ್ರಾಪ್ತವಾಗಲಿದೆ. ಏಕೆಂದರೆ ಶ್ರೀ ರಾಮನೊಲಿಯಬೇಕಾದರೆ ಶಾಸ್ತ್ರ ಓದುವುದು ಬೇಡ. ಸತ್ಕುಲದಲ್ಲಿ ಜನಿಸು

ವುದು ಬೇಡ. ಜ್ಞಾನಿಮಹಾಸಿಗಳಾಗಿ ಭಜಿಸುವುದು ಬೇಡ. ಅನನ್ಯ ಭಕ್ತಿ ಇದ್ದರೆ ಸಾಕು. ಭಕ್ತಿಭಾವದಿಂದಾತನ ಸಾಮೀಪ್ಯಹೊಂದಿದರೆ ನೀರಿಲ್ಲಾದ ಮುತ್ತು ಪುನಃ ನೀರಾಗದ ಹಾಗೆ, ರಸಬಾವಿಯಲ್ಲದ್ದಿದ ಕಬ್ಬಿಣವು ಕಬ್ಬಿಣ ವಾಗದ ಹಾಗೆ ಸತ್ತು ಹುಟ್ಟುವ, ಹುಟ್ಟಿ ಸಾಯುವಂತಹ ತೊಡಕಿನ ಈ ದೇಹವು ಸಾರ್ಥಕವಾಗುವುದು. ಇಂತಹ ಸದಿಚ್ಛೆಯಿದ್ದವರು ಮಾತ್ರ ನನ್ನ ಜತೆಯುಲ್ಲಿಯೇ ಬರಬಹುದು. ಸಾರಥಿಯೇ! ಇದೇ ರೀತಿ ಎಲ್ಲರೂ ಕೇಳು ವಂತೆ ಡಂಗುರ ಹೊಡೆಸಿ ಬಿಡು

ಸಾರಥಿ:- ಏನ್ರಯ್ಯ! ಎಲ್ಲರೂ ಕೇಳಿರಿ. ಸಂಸಾರದ ಆಶೆಯಿದ್ದವರು ಯಾರೂ ಬರಬೇಡ್ರಿ. ಸಂಸಾರದಲ್ಲಿ ನಿರಾಶೆಯಿದ್ದವರು ಸರ್ವರೂ ಬನ್ರಿ. ಸ್ವಾಮಿ! ಡಂಗುರ ಸಾರಿದಂತಾಯಿತು.

ಅತಿ:- ಬಹಳ ಸಂತೋಷ. ಹೋಗೋಣ!

ಬಳಿಕ ತತ್ವವ ತಿಳಿದು ರಾಮನೇ ಪರದೈವ । ವಳಿಯುದಚಲ ಬ್ರಹ್ಮ ನೆಂದು ॥ ತಿಳಿದಿರ್ದ ದೈತ್ಯಕುಲ ಗಜರಥ ಹಯಂಗಳಲಿ । ಬಳಸಿತತಿಕಾಯ ನನು ಬಂದು ॥೩॥

ಸಾರಥಿಯೇ! ಕೇಳು. ಶ್ರೀರಾಮನ ಪ್ರಭಾವವೋ ಅಥವಾ ಅಧ್ಯಾತ್ಮ ಜ್ಞಾನದ ಮಹತ್ವವೋ ನನ್ನೀ ಬೋಧನೆಯು ಲಂಕಾನಿವಾಸಿಗಳ ಚಿತ್ತಕ್ಕೆ ವೇದ್ಯವಾಯಿತೆನ್ನಬೇಕು. ಕಾರಣ ಚಿತ್ತವೆಂಬ ಸಾಗರದಿಂದೇಳುವ ಸಂಕಲ್ಪ ವಿಕಲ್ಪಗಳೆಂಬ ತೆರೆಗಳೇ ಚಿತ್ತ ವೃತ್ತಿಗಳು. ಅವುಗಳ ಅಲೆದಾಟ ಚೆಲ್ಲಾಟ ಗಳೇ ಚಿತ್ತಚಾಂಚಲ್ಯ ಹಾಗೂ ವಿಭ್ರಮಕ್ಕೆ ಕಾರಣ. ಅವು ಏಳದಿದ್ದರೆ ನಿರಭ್ರ ನೀಲಾಕಾಶವನ್ನು ಪ್ರತಿಬಿಂಬಿಸುವ ನಿರ್ಮಲ ನಿಶ್ಚಲ ಸರೋವರ ದಂತೆ ಮನಸ್ಸು ವಿಶುದ್ಧ ಹಾಗೂ ಪ್ರಶಾಂತವಾಗಿ ಪರತತ್ವವನ್ನು ಪ್ರತಿಬಿಂ ಬಿಸಬಲ್ಲುದು. ಹೀಗಾಗಿ ಪರತತ್ವದ ಜ್ಞಾನೋದಯದಿಂದ ಶ್ರೀರಾಮನೇ ಪರದೈವ, ಶಾಶ್ವತವಾದ ಪರಬ್ರಹ್ಮನೆಂದೇ ನಿಶ್ಚಯಿಸಿಕೊಂಡು ಎಷ್ಟೋ ಮಂದಿ ದನುಜ ರಾಕ್ಷಸರು ಬಳಸಿ ಬರುತಿದ್ದಾರೆ ನೋಡಿದೆಯಾ!

॥ ಭಾಮಿನಿ ॥

ದಕ್ಷನಂದನೆ ಕೇಳು ದನುಜಾ । ಧ್ಯಕ್ಷಸುತನೀ ತೆರದೊಳಿಲ್ಲರ । ಆ ಕ್ಷಣವೆ ಒಡಗೊಂಡು ರಣಕ್ಕೈತರುವ ಸಂಭ್ರಮವ ॥ ಈಕ್ಷಿಸುತ ಪೌರಾಂಗನಾ

ಜನ । ಲಕ್ಷದೊಡನೊಡನೈದೆ ತವೊಮ್ಮೆಳು । ಅಕ್ಷಿಯಲಿ ನೀರೇರಿ ಹುಃಬಿಸುರ್ದರಲ್ಲಲ್ಲಿ ॥೧॥

ಅತಿ:- ಸೈನಿಕರೆ! ಇನ್ನೇನು ಶೀಘ್ರವಾಗಿ ನಡೆಯೋಣ! ರಣವಾದ್ಯಗಳ ಕೋಲಾಹಲ, ರಥಚಕ್ರಗಳ ಚೀತ್ಕಾರ, ಸೇನಾಮಂಡಲದ ಸಿಂಹಧ್ವಾನ ಇವುಗಳಿಂದ ರಿಪು ಬಲಗಳ ಹೃದಯವು ಜರ್ಝರಿತವಾಗುವಂತೆ ವೇಗವಾಗಿ ನಡೆಯಿರಿ!

ಪುರ ಸ್ತ್ರೀಯರು:- ಪ್ರಿಯ ಸಹೋದರಿಯೆ! ಹೀಗೆ ಬಾ! ಅತ್ತ ನೋಡಿದೆಯಾ?

ರಾಗ-ಶಂಕರಾಭರಣ । ತಾಳ-ಏಕ

ಇತ್ತ ನೋಡೆ ತಂಗಿ ರಾವ । ಣಾತ್ಮಜನತಿಕಾಯನು ದಂ । ಡೆತ್ತಿ ರಣ ಕೈತರುವ ಬಹಳ । ವಿಸ್ತಾರವನು ॥೧॥

ಅತ್ತಿಗೆ:- ತಂಗಿ ಕೋಮಲಾಂಗಿಯೆ! ಇತ್ತ ನೋಡು! ಮಹಾ ಸಂಭ್ರಮದಿಂದ ಆನೆ, ಕುದುರೆ ಮೊದಲಾದ ಚತುರ್ಬಲದೊಡನೆ ಸಂಗ್ರಾಮಕ್ಕಾಗಿ ತೆರಳುವ ವೀರನಾರೆಂದು ತಿಳಿದೆಯಾ? ಇವನು ನಮ್ಮ ಮಹಾಪ್ರಭುಗಳಾದ ರಾವಣೇಶ್ವರರ ಮೋಹದಣುಗ ಅತಿಕಾಯನಲ್ಲವೇ!

ಕೃತ್ತಿವಾಸಗರಿದು ರಾಮ । ನುತ್ತಮ ಪೋಹಟದ ಪ್ರೌಢಲು । ಮತ್ತಗಜಗಮನೆಯಿವನ । ಸತ್ವವೆಂತುಟೋ ॥೨॥

ಅತ್ತಿಗೆ:- ಅತಿಕಾಯನ ವಿಚಾರ ಲೋಕಪ್ರಸಿದ್ಧವಿದೆ. ಕಾರಣ- ಇವನು ನಮ್ಮ ಲಂಕಾ ನಗರದ ಸೌಭಾಗ್ಯಕ್ಕೆ ಆಶ್ರಯದಾತನು. ಮತಿವಂತನಾಗಿ, ಪರಮ ಧಾರ್ಮಿಕನಾಗಿ, ರಾಕ್ಷಸಾನ್ವಯಕ್ಕೆ ತಿಲಕಪ್ರಾಯನು. ಮದಗಜಗಮನೆಯೇ ಕೇಳು! ಈಗ ರಾಕ್ಷಸರ ಹಿಂಡು ಕಟ್ಟಿಕೊಂಡು ಯುದ್ಧಕ್ಕೆ ಹೊರಡುವುದನ್ನು ನೋಡಿದರೆ ಪರಮಾಶ್ಚರ್ಯವಿದೆ. ಶ್ರೀರಾಮನ ಸೇನಾ ಸಮುದ್ರವನ್ನು ಕಲಕುವುದಕ್ಕೆ ಮಹಾ ರುದ್ರನಿಗೂ ಅಸಾಧ್ಯವೆಂಬಾಗ ಗೆದ್ದು ಬರುವರಾರು? ಅಂತಹ ಸಾಮರ್ಥ್ಯವು ಇವನಲ್ಲಿರಬಹುದೇ?

ಆದರೇನನೆಂಬೆನಕ್ಕ ಪು । ಣ್ಯೋದಯ ರಕ್ಕಸರೊಳಿವನು । ಶ್ರೀಧರನ ಚರಣ ಕಮಲಕಾನತ ಕಾಣೆ ॥

ನಾದಿನಿ:- ಅಕ್ಕಾ! ಲಂಕಾನಿವಾಸಿಗಳು ಪ್ರತಾಪಶಾಲಿಗಳು, ಕಾಮ ರೂಪಿಗಳು, ರಣದಲ್ಲಿ ಮಹಾಸಮರ್ಥರು. ಆದರೆ ಈ ಪುಣ್ಯಾತ್ಮನಿಗೆ ಸರಿ ಯಾದವರಾರು? ಏಕೆಂದರೆ ಲಕ್ಷ್ಮೀರಮಣನ ಪಾದಭಜಕನಾಗಿ ಶಕ್ತಿ ಯುಕ್ತಿ ಮೊದಲಾದ ಸದ್ಗುಣಗಳಲ್ಲಿ ಶ್ರೇಷ್ಠನಾಗಿ ಮೆರೆದಾಡುತ್ತಿರುವನಲ್ಲವೇ?

ವಾದಗಟ್ಟಿ ಫಲವೇನಿನ್ನು । ಪೋದುದೀಲಂಕೆಯೈಶ್ವರ್ಯ । ಈ ದಿವ್ಯ ಪುರುಷನ ಕೂಡೆ । ನಾದಿನಿ ಕೇಳೆ ॥೪॥

ಅತ್ತಿಗೆ:- ನಾದಿನಿಯೆ! ಸಕಲಗುಣ ಸಂಪನ್ನನಾದ ಅತಿಕಾಯನು ದಿವ್ಯ ಪುರುಷನು. ಲಂಕೆಯ ಸರ್ವಸಂಪತ್ತಿಗೂ ಶ್ರೇಯೋಭಿವೃದ್ಧಿಗೂ ಇವನೇ ಕಾರಣ. ಇಂತಹ ಪುಣ್ಯಾತ್ಮನು ಯಾವಾಗ ಲಂಕೆಯಿಂದ ತೆರಳಿ ದನೋ ಲಂಕಾಲಕ್ಷ್ಮಿಯೂ ಹೊರಟಳೆಂದೇ ತಿಳಿಯಬೇಕು. ತಂಗಿ! ಈ ಮಾತು ನಿರ್ವಿವಾದವಲ್ಲವೇ?

ಪರರ ಹೆಣ್ಣಿಗಾಗಿ ತನ್ನ । ತರಳನನ್ನು ರಣಕೆ ನೂಕಿ । ಮೆರೆವನಲ್ಲೊ ದಶಕಂಧರನು । ಹರ ಮಹಾದೇವ ॥೫॥

ನಾದಿನಿ:- ಅತ್ತಿಗೆಯೇ! ಶ್ರೇಯಸ್ಸಿಗೆ ನಡತೆಯೇ ಕಾರಣ. ಕುಲ, ಗೋತ್ರ, ಪ್ರಭುತ್ವ ಯಾವುದೂ ಅಲ್ಲ. ರಾವಣೇಶ್ವರ ಪ್ರಭುಗಳಲ್ಲಿ ಏನು ಕಡಿಮೆ? ದುರ್ನಡತೆಗೊಳಗಾಗಿ ಸೀತಾಮಾತೆಯನ್ನು ತಂದು ಸೆರೆಯಲ್ಲಿಟ್ಟ ಕಾರಣ ರಾಕ್ಷಸರೇಳಿಗೆಯೇ ಕುಂದಿ ಹೋಯಿತು. ಆದರೂ ಪಶ್ಚಾತ್ತಾಪ ಪಡದೆ ಸಾಕಿದ ಮಕ್ಕಳನ್ನೇ ಯುದ್ಧಕ್ಕೆ ನೂಕಿ ವಿಜೃಂಭಿಸುತ್ತಿರುವರಲ್ಲವೇ? ಹಾ ಮಹಾದೇವನೇ!

ಮರುಳಾದಳೇನೆ ಕೇಳಕ್ಕ । ಪರಮ ವೈಷ್ಣವನ್ನ ಮಾತೆ । ವರ ಧಾನ್ಯ ಮಾಲಿನಿಯು ಇವನ । ಹರಸಿ ಕಳುಹಲೇ ॥೬॥

ನಾದಿನಿ:- ಪುರುಷರಿಗೇನು ಗೊತ್ತು ಮಕ್ಕಳ ಶೋಕ. ಹೊತ್ತು ಹೆತ್ತು ಸಾಕಿದ ತಾಯಂದಿರಿಗೇ ಗೊತ್ತು. ಅಯ್ಯೋ ಕಾಲಸ್ಥಿತಿಯೇ! ಪ್ರಭು ಗಳ ಮಾತಂತಿರಲಿ. ಪರಮ ವೈಷ್ಣವನಾದ ಮಗನನ್ನು ತಾಯಿಯಾದ ಧಾನ್ಯಮಾಲಿನಿಯು ಯುದ್ಧಕ್ಕಾಗಿ ಏಕೆ ಬೀಳ್ಕೊಟ್ಟಳೋ? ಯಾವ ಧೈರ್ಯ ದಿಂದ ಹರಸಿಬಿಟ್ಟಳೋ? ತಿಳಿಯದು.

ಅತ್ತಿಗೆ:- ಸ್ತ್ರೀಯರ ಚಿತ್ತ ಚಂಚಲವಲ್ಲವೇ?

॥ ವಾರ್ಧಿಕ ॥

ಇಂತೆಂದು ತತ್ಪುರದ ಪ್ರಮದೆಯರ್ ಸಮುದೆಯರ್ । ಶಾಂತಸ್ಮೋಕ್ತಿ
ರಸೆ ಮಾತಾಡುತಂ ಕಾಡುತಂ । ಸಂತಾಪವಮಂ ತಾಳಿಸುಯ್ಯುತಂ ಬಯ್ಯು
ತಂ ದಶಶಿರನನಿರದಿತ್ತಲು ॥೧॥

ಸಾದಿನಿ:- ಅಕ್ಕಾ ದೇವೇಚ್ಛೆಯಾರು ಬಲ್ಲರು? ಹೆಂಗಸರಾದ ನಾವು ವೃಥಾ ಕಣ್ಣೀರು ಸುರಿಸಿದರೆ ಏನು ಪ್ರಯೋಜನ? ಬೇಗ ಮನೆಗೆ ಹೋಗೋಣ! ಭಕ್ತ ರಕ್ಷಕನಾದ ಶ್ರೀರಾಮನಿದ್ದಾನೆ. ರಕ್ಷಿಸಿಕೊಂಡಾನು.

ಸಂತಸದೊಳತಿಕಾಯನುಬ್ಬುತಂ ಪರ್ಬುತಂ । ಮುಂತಳೆದು ಬರು
ವಂತೆ ರಥದೊಳಂ ಪಥದೊಳಂ । ಕಂತುಪಿತನಂ ಮನದಿ ನೆನೆವುತಂ ಕೊನೆ
ವುತಂ ಬರುತಿರ್ದನಾಜೆಗಂದು ॥೨॥

ಅತಿ:- ಸಾರಥಿಯೇ! ಕೇಳಿದೆಯಾ? ಸ್ತುತಿಪಾಠಕರ ಜಯಘೋಷದೊಡನೆ ದೇವದುಂದುಭಿಗಳು ಮೊಳಗುತ್ತಿವೆ. ಪ್ರಯಾಣದಲ್ಲಿ ಧೈರ್ಯಗುಂದದಂತೆ ಸುರಮುನಿಗಳು ಹರಸುತ್ತಿದ್ದಾರೆ. ಸುತ್ತಲೂ ಪುಷ್ಪ ವೃಷ್ಟಿಯು ಸುರಿಯುತ್ತಿರುವುದನ್ನು ಯೋಚಿಸುವಾಗ ಇಂದಿನ ಬವರವು ಸುಖಪ್ರದವಾಗಿ ಮೋಕ್ಷ ಸಾಮ್ರಾಜ್ಯವು ಲಭಿಸುವಂತೆ ಕಾಣುವುದು. ಇನ್ನು ತಡವಿಲ್ಲ. ಸೈನಿಕರೆ! ಹೆದರಬೇಡಿರಿ! ಬವರದಲ್ಲಿ ಶತ್ರುಬಲವನ್ನು ನಾಶಮಾಡಬೇಕು. ಇಲ್ಲವೆ ಸ್ವರ್ಗ ಪಡೆಯಬೇಕೆಂಬ ನಿರ್ಧಾರದಿಂದ ಧೀರರಾಗಿ ನಡೆಯಿರಿ. ಶರತ್ಕಾಲದ ಮೇಘಕ್ಕೆ ಸಮಾನವಾಗಿ ಆಕಾಶದಲ್ಲಿ ಚರಿಸುವ ಹಂಸಪಂಕ್ತಿಯಂತೆ, ಧವಳಾಯಮಾನವಾದ ಶಸ್ತ್ರಾಸ್ತ್ರಗಳನ್ನು ಝಳಪಿಸುತ್ತಾ ಸರ್ವರೂ ಸಾಲಾಗಿ ಬೇಗನೆ ಸಾಗಿರಿ.

॥ ಕಂದ ಪದ್ಯ ॥

ಬೆಟ್ಟವೆ ಹಾರುತಹುದೆನುತಲಿ । ಬೆಬ್ಬಿತ್ತೆ ಕಪಿ ಬಲವೈದೆ ಬಹುಪಟು
ಭಟರಂ ॥ ನಿಟ್ಟಿಸಿ ಮನದೊಳ್ ಬೆರಗಂ । ಬಟ್ಟು ವಿಭೀಷಣನೊಳೆಂದನವ
ನಿಪ ಕುಲ ತಿಲಕಂ ॥೧॥

ರಾಮ:- (ಸ್ವ) ಇದೇನು ನಿಶ್ಚಲ ನೀಲಾಚಲವೇ ಎದ್ದು ಈಕಡೆ ಬರುವಂತಿದೆ. ನೆಲವನ್ನಳೆದು ಗಗನಾಂಗಣದವರೆಗೆ ವ್ಯಾಪಿಸಿದ ತ್ರಿವಿಕ್ರಮನೋ ತಿರುಗಿ ಬಂದಂತೆ ಕಾಣುತ್ತಿದೆಯಲ್ಲಾ! ನೋಡಿದೊಡನೆ ಕಪಿಕಟಕ

ವೆಲ್ಲ ದಿಗ್ಭ್ರಾಂತಿಯಿಂದ ಚದರುತ್ತಿರುವುದು. ಬಂದಾತ ರಾಕ್ಷಸರಲ್ಲಿ ಯಾರಿರಬಹುದು? ವಿಭೀಷಣ! ಎಂತಹ ಅದ್ಭುತ ನೋಟವಿದು. ನಮ್ಮ ಸೈನಿಕರೆಲ್ಲ ಭಯಭ್ರಾಂತಿಯಿಂದ ಅತ್ತಿತ್ತ ಓಡಿಹೋಗುತ್ತಿರುವುದನ್ನು ಪರೀಕ್ಷಿಸಿದೆಯಾ!

ರಾಗ–ತೋಡಿ । ಏಕ–ತಾಳ

ಈತನಾರು ಪೇಳಯ್ಯ । ವಿಭೀಷಣಾಂಕ । ನೀನು ಭೂತಳದೊಳಿವನ ಪೋಲ್ವರನ್ನು ಕಾಣೆ । ನಾನು ಈತೆರದ ರಕ್ಕಸರು ನಿಮ್ಮ ಬಲದೊಳಿಸಿಬ ರೆಂದು । ಸೀತಾರಮಣ ಕೇಳಲಾಗ ಪೇಳ್ದ । ನಾ ತಗಂದು ॥೧॥

ರಾಮಃ– ಶರಣ ವಿಭೀಷಣ! ಹೀಗೆ ಬಾ! ರಾಹು ಚಿಹ್ನೆಯಿಂದ ಚಿತ್ರಿತವಾದ ಧ್ವಜಾಗ್ರದಿಂದಲೂ ಭೀಕರಾಕೃತಿಯ ನಾಲ್ಕು ಮಂದಿ ಸಾರಥಿಗಳಿಂದಲೂ ಶೋಭಿಸುತ್ತಿರುವ ಮಹಾ ರಥವನ್ನೇರಿ ಈಕಡೆ ಬರುತ್ತಿರುವ ರಾಕ್ಷಸಾಧಮನು ಯಾರಿರಬಹುದು? ನೋಡಿದರೆ ರಥದ ಸುತ್ತಲೂ ಮೂವತ್ತೆಂಟು ಬತ್ತಳಿಕೆಗಳು ತೂಗಾಡುತ್ತಿವೆ. ಆತನ ಇಕ್ಕಡೆಗಳಲ್ಲಿ ಹತ್ತು ಮೊಳಕ್ಕಿಂತಲೂ ಉದ್ದವಾದ ಎರಡು ಕತ್ತಿಗಳು ಥಳಥಳಿಸುತ್ತಿವೆ. ಕಾಗೆಯಂತೆ ಕಪ್ಪಾದ ಮಹಾ ಕಾಯವುಳ್ಳ ರಾಕ್ಷಸನು ಮೃತ್ಯುವಿನಂತೆ ಬಾಯ್ದೆರೆದು ಬರುತ್ತಿರುವಾಗ ಕಾಳ ಮೇಘಗಳಲ್ಲಿ ಮರೆಗೊಂಡ ಸೂರ್ಯನ ಬಾಲದಂತೆ ಕಾಣುತ್ತಿರುವುದು. ಆದ್ದರಿಂದ ಇಂತಹ ಭಯಂಕರಾಕೃತಿಯ ರಾಕ್ಷಸರು ಬ್ರಹ್ಮ ಸೃಷ್ಟಿಯಲ್ಲಿಯೇ ಇಲ್ಲ. ಇದ್ದರೆ ಮೊದಲು ಮಡಿದು ಬಿದ್ದ ಕುಂಭಶ್ರವಣನೇ ಸರಿ. ಅಲ್ಲವಾದರೆ ಇನ್ನು ನಿನ್ನ ಬಳಗದಲ್ಲಿ ಎಷ್ಟು ಮಂದಿಗಳಿರಬಹುದೆಂಬುದನ್ನು ಸರಿಯಾಗಿ ಹೇಳು.

ವಿಭೀಷಣಃ– ಜೀಯ! ಅರಿಕೆಮಾಡಿಕೊಳ್ಳುತ್ತೇನೆ.

ರಾಗ–ಸೌರಾಷ್ಟ್ರ । ತಾಳ–ಅಷ್ಟ

ಜೀಯ ಲಾಲಿಸು ವೀರನತಿಕಾಯನೆಂಬಾತ ನೀತ ಕಾಣೈ । ದೈತ್ಯರಾಯ ರಾವಣನೆರಡನೆಯ ಕುಮಾರಕ ನೀತಕಾಣೈ ॥೧॥

ವಿಭೀಷಣಃ– ಶ್ರೀ ರಾಮಚಂದ್ರನೆ! ಆಲಿಸಬೇಕು. ಕುಬೇರನ ತಮ್ಮನಾಗಿ, ಕ್ರೂರ ಕರ್ಮಿಯಾಗಿ, ಪ್ರತಾಪದಿಂದಿರುವ ದಶಗ್ರೀವನನ್ನು ಬಲ್ಲಿರಷ್ಟೆ? ಆತನ ಕಿರಿಯ ಪತ್ನಿಯಾದ ಧಾನ್ಯಮಾಲಿನಿಯೆಂಬ ಗಂಧರ್ವ ಸ್ತ್ರೀಯ ಗರ್ಭಸಂಜಾತನೇ ಇವನು. ಇಂದ್ರಾರಿಯು ಮೊದಲನೆಯವನಾದರೆ ಇವನೇ

ಎರಡನೇಯ ಮಗನಾದ ಅತಿಕಾಯನೆಂಬವನು. ಇವನ ವಿಚಾರ ಏನು ಹೇಳಲಿ? ಘೋರವಾದ ತಪೋಬಲದಿಂದ ಬ್ರಹ್ಮನನ್ನೊಲಿಸಿ; ದಿವ್ಯವಾದ ರಥವನ್ನೂ, ಯಾರಿಂದಲೂ ಸಾವಿಲ್ಲದಂತಹ ವರವನ್ನೂ ಪಡೆದಿರುವನು. ಸೂರ್ಯ ತೇಜಸ್ಸುಳ್ಳ ಈ ರಥವು ದೈವಾನುಗ್ರಹದಿಂದಲೇ ಉಪಲಬ್ಧವಿದೆ.

ರಾಮ:- ವಿಭೀಷಣ! ಮಹಾಕಾಯನಾಗಿ ಅತಿಕಾಯನೆಂಬ ಅನ್ವರ್ಥನಾಮಕೊಳ್ಳಪಟ್ಟ ಈತನ ಗುಣ ಸ್ವಭಾವ ಹೇಗಿದೆ?

ವಾಯುಜಾತನ ತಂದು ಕಟ್ಟಿದಾತನ ತಮ್ಮ। ನೀತ ಕಾಣ್ಪೈ ॥ ಖೂಳ-ನಾಯಿಯೆಂದೆನಬೇಡ ಭಕ್ತರೊಳ್ ವೆಗ್ಗಳ । ನೀತ ಕಾಣ್ಪೈ ॥೨॥

ವಿಭೀಷಣ:- ದೇವ! ಸೀತಾ ಮಾತೆಯ ಅನ್ವೇಷಣಕ್ಕಾಗಿ ಹೋದ ಆಂಜನೇಯನನ್ನು ಬ್ರಹ್ಮಾಸ್ತ್ರದಿಂದ ಬಂಧಿಸಿದ ಮೇಘನಾದನ ತಮ್ಮನಿರುವಾಗ ಈತನ ಪರಾಕ್ರಮ ಎಂತಿರುವುದೋ ಯೋಚಿಸಿರಿ! ಮುಖ್ಯವಾಗಿ ಮೊದಲು ನಡೆದ ದೇವಾಸುರ ಯುದ್ಧದಲ್ಲಿ ಅನೇಕ ಯಕ್ಷರನ್ನು ಹೊಡೆದಿಕ್ಕಿ ಇಂದ್ರನ ವಜ್ರಾಯುಧವನ್ನು ಕೂಡಾ ಸ್ತಂಭಗೊಳಿಸಿರುವನು. ಅಲ್ಲದೆ ಗುಣಗಳಲ್ಲಿ, ಯುದ್ಧನೀತಿಯಲ್ಲಿ, ಯುಕ್ತಿಯುಕ್ತವಾದ ಮಂತ್ರಾಲೋಚನೆಯಲ್ಲಿ ಬಹು ಸಮರ್ಥನು. ಭಕ್ತರಲ್ಲಿ ಪರಮ ಭಕ್ತನಾಗಿ, ಸಜ್ಜನರಲ್ಲಿ ಅತಿ ಸಜ್ಜನನಾಗಿ, ಮಹಾ ಧಾರ್ಮಿಕನಿರುವುದರಿಂದ ಈ ಅತಿಕಾಯನು ರಾಕ್ಷಸ ಕುಲೋದ್ಭವನಾದರೂ ಖೂಳ ನಾಯಿಯೆಂಬ ಅಪಶಬ್ದಕ್ಕೆ ಪಾತ್ರನಲ್ಲವೆಂದೇ ಹೇಳಬೇಕು.

ರಾಮ:- ಶರಣ ಶಿಖಾಮಣಿಯೇ! ಇವನಿಗೂ ಇಂದ್ರಾರಿಗೂ ಇರುವ ತಾರತಮ್ಯಗಳೇನು?

ಪಾತಕನಾ ಮೇಘನಾದ ಪುಣ್ಯಾತ್ಮಕ । ನೀತ ಕಾಣ್ಪೈ ॥ ಬಲು-ಘಾತಕನವನತಿಕಾಯ ನಿಷ್ಕಪಟನು । ಈತ ಕಾಣ್ಪೈ ॥೩॥

ವಿಭೀಷಣ:- ಮೇಘನಾದನು ರಾಕ್ಷಸರಲ್ಲಿ ಅತಿ ಕ್ರೂರ, ಪಾಪಕರ್ಮಿ, ದುಷ್ಟ ದುರಾಚಾರವುಳ್ಳವನು. ಆದರೆ ಆತನ ಸಹೋದರನಾದ ಅತಿಕಾಯನ ಗುಣಧರ್ಮವೇ ಬೇರೆ. ಘಾತಿಕರ್ಮಗಳಿಂದ ವಿರಹಿತನಾಗಿ ದೇವ ಗುರುಹಿರಿಯರನ್ನು ಗೌರವಿಸುತ್ತಾ ಸದಾಚಾರ ಸಂಪನ್ನನಿರುವನು. ಸದಾ ನಿಷ್ಕಪಟಿಯಾಗಿ, ನೀತಿ ಕೋವಿದನಾಗಿ, ವೈಷ್ಣವರಲ್ಲಿ ಅತಿ ವೈಷ್ಣವ

ನಾಗಿ ಪುಣ್ಯಾತ್ಮನೆಂಬ ಬಿರುದಾಂತಿರುವನು.

ರಾಮ:- ವಿಭೀಷಣ! ಪರಾಕ್ರಮಾತಿಶಯದಲ್ಲಿ ಹೇಗಿರುವನು.

ಆತನ ಸರಿಮಿಗಿಲೆನಿಸುವ ರಣದಲ್ಲಿ ನೀತ ಕಾಣ್ಪೆ। ಹೆಚ್ಚು-ಮಾತೇನು ವಿಕ್ಕಿನ ಗುಣದಲ್ಲಿ ವೆಗ್ಗಳ। ನೀತ ಕಾಣ್ಪೆ ||೪||

ವಿಭೀಷಣ:- ದೇವಾದಿ ದೇವನೆ! ಶಸ್ತ್ರಾಸ್ತ್ರಗಳ ಪ್ರಯೋಗದಲ್ಲಿ, ಅಶ್ವಶಾಸ್ತ್ರ, ಗಜಶಾಸ್ತ್ರ, ರಥಕಲ್ಪಾದಿ ವಿದ್ಯೆಗಳಲ್ಲಿ ಅತಿ ಪ್ರವೀಣನಾಗಿ ಕಾದಾಡಬಲ್ಲನು. ಖಡ್ಗ ಯುದ್ಧ, ಗದಾಯುದ್ಧ, ಮಲ್ಲಯುದ್ಧಾದಿ ಕಲಾ ಕೌಶಲ್ಯದಲ್ಲಿ ಇಂದ್ರಾರಿಗಿಂತಲೂ ಮೇಲಾಗಿ, ಸಾವಿರ ಕುದುರೆಗಳನ್ನು ಕಟ್ಟಿದ ವರೂಥವನ್ನೇರಿ ಅಧಿಕ ಪ್ರತಾಪದಿಂದ ಯುದ್ಧ ನಡೆಸಬಲ್ಲನು. ಹೆಚ್ಚು ಮಾತೇಕೆ? ಸದ್ಗುಣಗಳಲ್ಲಿ ಅತಿಕಾಯನು ಶ್ರೇಷ್ಠನಾದರೆ ದುರ್ಗುಣಗಳಲ್ಲಿ ಇಂದ್ರಜಿತುವೇ ಅಧಿಕನೆನಬೇಕು.

ರಾಮ:- ಏನೇ ಇರಲಿ! ಅತಿಕಾಯನ ಸಾಹಸತ್ವವನ್ನು ಪ್ರತ್ಯಕ್ಷವಾಗಿ ನಿರೀಕ್ಷಿಸಬಹುದಷ್ಟೆ!

। ಕಂದ ಪದ್ಯ ।

ಎಂಬೀನುಡಿಯಂ ಸುಗ್ರೀ। ವಂ ಬೆರಗಿನೊಳಾಲಿಸುತ್ತಲತಿ ಸಂಭ್ರಮದಿಂ || ಜಾಂಭವ ವಾಲಿಸುತಾದ್ಯರ। ನಂ ಬೇಗದಿ ಕರೆದುಸುರ್ದನವರೊಡನಾಗಳ್ ||೧||

ಸುಗ್ರೀವ:- ಜಾಂಭವರೇ! ಹನುಮ, ನಳ, ನೀಲ, ಅಂಗದಾದಿ ಪ್ರಮುಖರೇ! ವಿರೋಧಿಯ ಕುರಿತು ವಿಭೀಷಣನು ಸಾರಿದ ವಾಕ್ಯಗಳನ್ನು ಕೇಳದಿರಷ್ಟೆ! ಲೇಸಾಯ್ತು. ಸಮರ ನಿಮಿತ್ತವಾಗಿ ಸ್ವಾಮಿಯ ಅನುಗ್ರಹ ಪಡೆಯುವದಕ್ಕೆ ಸಿದ್ಧರಾಗುವ!

ಇದುವೆ ವೇಳೆಯುವು ರಾಘವನ ಚಿತ್ತ ಪಡೆಯುವುದಕ್ಕೆ। ವಿಕ್ಕಿನ ಮಾತಿನಿಂದಹುದೇನು || ಬೆದರದೆ ಬೆಚ್ಚದೆ। ಕುದುಕುಳಿದೈತ್ಯರ। ನೊದಗಿ ಕಾಳಗದೊಳ। ಗೆದೆಗೆಡಿಸುವುದಕ್ಕೆ ||೧||

ಸುಗ್ರೀವ:- ವಾನರ ವೀರರೇ! ಎದೆಗೆಡಬಾರದು. ಮಹಾ ಕಾಲನಂತಿರುವ ಮಹಾ ಕಾಯುವುಳ್ಳ ರಾಕ್ಷಸಾಧಮನು ಮುಂದೊತ್ತಿ ಬರುತ್ತಿದ್ದಾನೆ. ಇದಿರಾಗಿ ನಿಂತು ಕೈಕೈ ಹೊಯ್ದಾಡಿ ಶ್ರೀ ರಘುರಾಮನ ಮನಸ್ತೃಪ್ತಿಗೊ

ಳಿಸಿ ಅಂಗಚಿತ್ತವನ್ನು ಪಡೆಯುವುದಕ್ಕೆ ಇದೇ ಸುಸಂದರ್ಭ ಅದಕ್ಕಾಗಿ ಸರ್ವ ಕಪಿಗಳು ತಯಾರಾಗಿರಿ. ಕಲ್ಲುಗುಂಡು, ಗುಡ್ಡಬೆಟ್ಟ, ಮರಮಟ್ಟು ಮುಂತಾದ ವಿವಿಧಾಯುಧಗಳಿಂದ ನಿರ್ಭಯರಾಗಿ ಹೊಡೆದು, ಬಡಿದು ದುಷ್ಟದೈತ್ಯರನ್ನೆಲ್ಲಾ ಕೊಂದೇ ಬರುವುದಕ್ಕೆ ಬೇಗ ಹೊರಡಿರಿ.

ಜಾಂಭವ:– ಕಪಿರಾಜ! ಸ್ವಾಮಿಕಾರ್ಯಕ್ಕೆ ಹಿಂದುಳಿವವರಾರು?

ರಾಗ-ಶಂಕರಾಭರಣ । ಮಟ್ಟೆ-ತಾಳ

ತರಣಿಸುತನ ನುಡಿಯ ಕೇಳ್ದು । ಧುರ ಸಮರ್ಥ ಜಾಂಭವಂತ । ಸುತಪಜಾತನನಾಗ ನೀಲ । ಶರಭ ಮುಖ್ಯರು ॥ ಕರದೊಳಾಂತು ಕಲ್ಲು ಬೆಟ್ಟ । ಮರಗಳಿಂದ ಸಿಂಹನಾದ । ವೆರಸಿ ಖತಿಯ ತಾಳಿ ಕದನಕಿರದೆ ನಡೆದರು ॥೧॥

ಜಾಂಭವ:– ಕಪಿವೀರರೆ! ಕಪಿರಾಜನ ಆಜ್ಞೆ ಯಾಯಿತು. ಸರ್ವರೂ ಹೊರಡೋಣ! ಯುವರಾಜ ಅಂಗದನು ತನ್ನ ಗೋಲಾಂಗೂಲ ಸೈನ್ಯದೊಡನೆ ಪೂರ್ವದಿಕ್ಕಿನಲ್ಲಿ ಹೊಯ್ದಾಡಲಿ. ನಳ, ನೀಲ, ಶರಭಾದಿಗಳು ಕೆಲವು ಕಪಿವೀರರೊಡನೆ ಪಶ್ಚಿಮ ದಿಕ್ಕಿನಿಂದ ಕಾದಾಡಲಿ. ಗವಯ ಗವಾಕ್ಷ ಮೈಂದ ದ್ವಿವಿಧಾದಿಗಳು ಉತ್ತರ ದಿಕ್ಕಿನಲ್ಲಿ ಹೋರಾಡಲಿ. ಉಳಿದ ದಕ್ಷಿಣ ದಿಕ್ಕಿನಲ್ಲಿ ಋಕ್ಷವೀರರ ಸಹಾಯದಿಂದ ನಾನೇ ಯುದ್ಧ ನಡೆಸುವೆನು. ತಿಳಿಯಿತೇ?

ಕಾಣುತಿವರ ಪೌರುಷವನು । ಕೌಣಪರ ಬಲೌಘವಂದು । ಬಾಣ ಪರಶು ಚಕ್ರವಸಿಕ್ಷ । ಪಾಣಕುಂತದಿ ॥ ಮಾಣದೆಚ್ಚು ಕೊಚ್ಚಿ ಗಾಯ । ಕಾಣಿಸಲ್ಕೆ ಕಪಿ ಸಮೂಹ । ಚೂಣಿಯಲಿ ಬೆರಸಿ ಹೊಯ್ದು । ರೇನ ನೆಂಬೆನು ॥೨॥

ಅತಿ:– ಇದೇನು ಪೂರ್ವಾಂಬುಧಿಯು ಪಶ್ಚಿಮಾಂಬುಧಿಯನ್ನು ಸೇರುವುದಕ್ಕೆ ಬಂತೋ ಅಥವಾ ಪರ್ವತಗಳು ಒಂದೆಡೆಯಿಂದ ಇನ್ನೊಂದೆಡೆಗೆ ನಡೆದು ಬಂದುವೋ ಎಂಬಂತೆ ಕಪಿಸೈನ್ಯಗಳು ಅರ್ಭಟಿಸುತ್ತಾ ಬರುತ್ತಿವೆ. ಬಂದರೇನಾಯಿತು? ಕತ್ತಿಯಿಂದ ಕುತ್ತಿ, ಪಾಶಗಳಿಂದ ಸುತ್ತಿ, ಗದಾಮುದ್ಗರಗಳಿಂದ ಹೊಡೆದಿಕ್ಕಿ; ದೇವಾದಿದೇವತೆಗಳು ಬೆರಗಾಗುವಂತೆ ನನ್ನ ಪ್ರತಾಪವನ್ನು ತೋರಿಸಿ ಬಿಡುತ್ತೇನೆ. ಸೈನಿಕರೆ! ಬೆಬ್ಬಳಿಸಬೇಡಿರಿ. ಕತ್ತಿಗಳಿಂದ ಕಡಿಯಿರಿ. ಪಾಶಗಳಿಂದ ಸುತ್ತಿರಿ. ಚಕ್ರಗಳಿಂದಿರಿಯಿರಿ. ಶೂಲ

ಗಳಿಂದ ತಿವಿಯಿರಿ. ನಿಶಿತಾಸ್ತ್ರಗಳಿಂದ ಹೊಡೆದು ಕಪಿಕುಲವನ್ನೇ ಕೆಡಹಾಕಿರಿ

॥ ಭಾಮಿನಿ ॥

ಅರರೆ ಯಮನುಬ್ಬಟೆಯೊ ಮೃತ್ಯುವಿ । ನುರವಣೆಯೊ ಸಂಹಾರ ಭೈರವ । ನುರುಬೆಯೋ ನಾನರಿಯೆನತಿಕಾಯನ ರಣೋತ್ಸಹವ ॥ ಧುರದಿ ಕಪಿಗಳನೊರಸಿ ಮುಂದೈ । ತರುವ ಸುಭಟನ ಕಾಣುತಿತ್ತಲು । ವರ ವಿಭೀಷಣನೆಂಪನಿನ ಕುಲಸಾರ್ವಭೌಮಂಗೆ ॥೧॥

ವಿಭೀಷಣ:- (ಸ್ವ) ಅರರೆ ಎಂತಹ ಭಯಾನಕ ದೃಶ್ಯವಿದು. ಜಗತ್ತಿನ ಜನರನ್ನು ವಿನಾಶಗೊಳಿಸುವ ಅಂತ್ಯ ಕಾಲದ ಅಂತಕನ ಅರ್ಭಟೆಯೇ ಕೇಳುವಂತಿದೆ. ಹೀಗಾಗಲು ಮೃತ್ಯುದೇವತೆಯು ತಿತ್ತಿಗರನ್ನು ಕೂಡಿ ಈ ಲೋಗರನ್ನು ತುತ್ತುಗೊಳ್ಳುವ ಹೊತ್ತಾಯಿತೆ? ಅಲ್ಲ. ಪ್ರಳಯ ಕಾಲದ ಕಾಲಭೈರವನ ಕೋಪಾಟೋಪವೊ ಎಂಬಂತೆ ಮಹಾಕಾಯದ ಅತಿಕಾಯನು ವಾನರ ಸೈನ್ಯವನ್ನು ಹೊಡೆದಿಕ್ಕಿ ವರೂಢವನ್ನೇರಿ ದೆಸೆ ದೆಸೆ ಹಾರಿಸುತ್ತಾ ಪ್ರಚಂಡ ಕ್ರೋಧಾವೇಶದಿಂದ ಮುಂದೊತ್ತಿ ಬರುತ್ತಿರುವನು. ಈ ವಿಚಾರ ಶ್ರೀರಾಮ ಸ್ವಾಮಿಗೆ ಈಗಲೇ ತಿಳಿಸಬೇಕಾಗಿದೆ. ಭಗವಾನ್ ಸೂರ್ಯಕುಲ ಸಂಭೂತನಾದ ಶ್ರೀರಾಮಚಂದ್ರನೆ! ಇಂದಿದ ಕಾರ್ಯ ವಿಪರ್ಯಾಸವಾಯಿತಲ್ಲ! ಏನೆಂದು ಅರಿಕೆಮಾಡಿಕೊಳ್ಳುತ್ತೇನೆ.

ರಾಗ–ಪೂರ್ವಿ । ಏಕ–ತಾಳ

ಇದಕೊ ದೇವ ಬಂದನತಿಕಾಯ ನೋಡ । ಈತಗಿದಿರು ನಿಲುವ ಭಟರದಾರು ತೋರು ಘಾಡ ॥೧॥

ವಿಭೀಷಣ:- ದೇವನೆ! ಈಕಡೆನೋಡೋಣಾಗಲಿ. ಇದೊ ಇದಿರಾಗಿ ಬರುವ ಅತಿಕಾಯನ ಸಾಹಸ ಏನೆಂದು ಹೇಳಲಿ? ಅವನೊಡನೆ ಯುದ್ಧಕ್ಕಾಗಿ ಹೋದ ಕಪಿವೀರರಲ್ಲಿ ಹಲ ಕೆಲವರು ನಿಶ್ಪ್ರಾಣಿಗಳಾಗಿ, ಗತಪ್ರಾಣರಾಗಿ, ನಿಶ್ಚೇತನರಾಗಿ, ಕೈ ಕಾಲು ಮುರಿದುಕೊಂಡು ಚಂಡಿನಂತೆ ಹೊರಳಾಡುತ್ತಿರುವರು. ಇನ್ನು ನಮ್ಮ ಬಲದಲ್ಲಿ ಅತಿಕಾಯನನ್ನಿದಿರಿಸುವ ವೀರರಾರಿದ್ದಾರೋ ತಿಳಿಯದಾಗಿದೆ.

ರಾಮ:- ನಮ್ಮ ಬಲದಲ್ಲಿ ನಳ ನೀಲ, ಅಂಗದಾದಿ ಮುಖ್ಯ ಸೇನಾಪತಿಗಳಿಲ್ಲವೇ?

ಮೊದಲು ಸೋತರಂಗದಾದಿ ಸುಭಟರಿಲ್ಲ । ರಣದಿ ಚದುರಿಸಿವನು ಬಣಗುಜನ ಕೆಮಣಿವನಲ್ಲ ॥೨॥

ವಿಭೀಷಣ:- ಅತಿಕಾಯನು ಸಾಮಾನ್ಯ ರಾಕ್ಷಸನಂತಲ್ಲ ಯುದ್ಧ ವಿದ್ಯೆಯಲ್ಲಿ ಮಹಾ ಚತುರ. ಬ್ರಹ್ಮನಿಂದ ಮಹತ್ತರವಾದ ವರ ಪಡೆದಾತ. ಆದ್ದರಿಂದ ಎಷ್ಟೇ ಸಮರ್ಥರಾದರೂ ಸಂಗ್ರಾಮ ಕೈದಿದ ನಳ, ನೀಲ, ಅಂಗದಾದಿ ಸುಭಟಾಗ್ರಣಿಗಳು ಮೊದಲಾಗಿಯೇ ಸೋತುಹೋದರು. ಹನುಮ ಜಾಂಭವರು ಕೂಡಾ ಬ್ರಹ್ಮಾಸ್ತ್ರದಿಂದ ಬಂಧಿಸಲ್ಪಟ್ಟು ತಲ್ಲಣಿಸುತ್ತಿರುವರು. ದೇವಾ! ಅತಿಕಾಯನೆಂದರೆ ಅಲ್ಪ ವೀರರಾದ ಬಣಗು ಕಪಿನಾಯಕರಿಗೆ ತಲೆತಗ್ಗಿಸುವ ಭಟನಲ್ಲವೆಂದೇ ಹೇಳಬೇಕು.

ಇನಿತು ಮಾತಾಡುವುದ ಲಕ್ಷ್ಮಣಾಂಕನಾಗ । ತನ್ನ ಧನುಶರಗಳ ಕೊಂಡು ರಾಮಗೆರಗಿ ಬೇಗ ॥೩॥ ಜನಪ ತನ್ನ ಸಾಹಸಗಳ ಪರಿಕಿಸೆಂದು । ಸಮರ- ಕನುವಾದನು ದಶಶಿರನ್ನ ಸುತನೊಳೆಂದು ॥೪॥

ಲಕ್ಷ್ಮಣ- (ಸ್ವ) ವಿಭೀಷಣನ ಭಯಭೀತಿಯ ವಾಚ್ಯಾರ್ಥದಿಂದ, ಅಂಗದಾದಿ ಕಪಿವೀರರಿಗಾದ ಪರಾಭವದಿಂದ ನಮ್ಮಗ್ರಜನು ವಿಚಾರಮಗ್ನನಾದಂತೆ ಭಾಸವಾಗುವುದು ಈ ಮಧ್ಯದಲ್ಲಿ ಆಹವಕ್ಕೆ ಸಿದ್ಧನಾದ ನಾನು ವೀರೋಕ್ತಿಗಳನ್ನಾಡಿ ಪ್ರೋತ್ಸಾಹಗೊಳಿಸುವುದು ಅಗತ್ಯ. ಅಣ್ಣ! ಲಾಲಿಸಬೇಕು. ದಶಕಂಠನ ದ್ವಿತೀಯ ಪುತ್ರ ಅತಿಕಾಯನು ನಮ್ಮ ಕಪಿಸಮೂಹವನ್ನು ಗೆದ್ದಮಾತ್ರಕ್ಕೆ ಭಯಭ್ರಾಂತಿಯಿಂದ ಯಾರೂ ಕಳವಳಿಸಬೇಕಾಗಿಲ್ಲ. ಧನುರ್ಧಾರಿಯಾದ ನನಗೆ ಈಗಲೇ ಅಪ್ಪಣೆ ಕೊಡು. ರಣಾಜಿರದಲ್ಲಿ ನಾನು ತೋರುವ ಸಾಹಸಾತಿಶಯವನ್ನು ಬೇಗನೆ ಪರೀಕ್ಷಿಸಬಹುದು.

ರಾಮ:- ಲಕ್ಷ್ಮಣನೇ! ಸ್ವಲ್ಪ ಸೈರಿಸು.

ರಾಗ-ಕೇದಾರ ಗೌಳ । ತಾಳ-ಅಷ್ಟ

ಎಂದು ಸಂಗರಕೆ ಸನ್ನಹನಾದ ಸೌಮಿತ್ರಿ । ಯಂದವೀಕ್ಷಿಸಿ ರಾಮನು ॥ ಚಂದದಿಂದೆತ್ತಿ ತಕ್ಕೈಸಿ ಮುದ್ದಿಸುತಲಾ । ನಂದದೊಳಿಂತೆಂದನು ॥೧॥

ರಾಮ:- ತಮ್ಮ ಲಕ್ಷ್ಮಣ! ಬೇಗ ಬಾ! ನಿನ್ನಲ್ಲಿರುವ ಪ್ರೀತಿ ವಿಶ್ವಾಸ ಹಾಗೂ ಆತ್ಮಸ್ಫೂರ್ತಿಗಾಗಿ ಅತ್ಯಾನಂದವಾಯಿತು. ಈಗ ಬಂದಿರುವ ಪ್ರತಿಭಟನು ಸಾಮಾನ್ಯನಲ್ಲ. ನೋಟಕ್ಕೆ ಮಹಾಕಾಯನಾದ ರಾಕ್ಷಸನಂತಿದ್ದರೂ

ನಿಜ ಸ್ಥಿತಿಯೇ ಬೇರೆ.

ಲಕ್ಷ್ಮಣ:- ಅಣ್ಣ! ನಿಜ ಸ್ಥಿತಿ ಏನೇ ಇರಲಿ. ವೃಥಾ ಕಾಲಕಳೆಯುವುದು ಸರಿಯಲ್ಲ.

ಎಲ್ಲವರಂತಲ್ಲ ಭೂರಿ ಪರಾಕ್ರಮ । ವುಳ್ಳವನತಿಕಾಯನು ॥ ಬಿಲ್ಲು ಹಿಡಿದು ಮರ್ಮವರಿತು ಕಾದೆಂದು ಭೂ । ವಲ್ಲಭನರುಹಿದನು ॥೨॥

ರಾಮ:- ಅಣುಗ ಲಕ್ಷ್ಮಣನೆ! ಹಿಂದೆ ನಾವು ಅನೇಕಾನೇಕ ರಾಕ್ಷಸರನ್ನು ಕೊಂದಿದ್ದರೂ, ಈಗ ಬಂದವನು ಯಾರಿಂದಲೂ ಸಾವಿಲ್ಲದಂತಹ ವರಪಡೆದವನು. ಬ್ರಹ್ಮಜ್ಞಾನದಲ್ಲಿ, ಭಕ್ತಿ ಯುಕ್ತಿಗಳಲ್ಲಿ, ಶೌರ್ಯ ಧೈರ್ಯ ಪರಾಕ್ರಮಗಳಲ್ಲಿ ಅದ್ವಿತೀಯನು. ಬ್ರಹ್ಮನ ವರಬಲದಿಂದ ದೇವೇಂದ್ರನ ವಜ್ರಾಯುಧವನ್ನೂ ಲಕ್ಷಿಸದವನು. ಅಂತಹ ಮಹಾ ಪರಾಕ್ರಮಿಯೊಡನೆ ಶಸ್ತ್ರಾಸ್ತ್ರಗಳನ್ನಾಂತು ಯಾರು ಕಾದಾಡುವರು! ನಿನಗಂತೂ ಸಾಧ್ಯವಿದೆಯೇ?

ಅಣ್ಣ ನೀವೇಕಿನಿತೆಂಬಿರಿ ರಣದೊಳು । ಗಣ್ಯವೆ ತನಗಾತನು ॥ ಮಣ್ಣುಗೂಡಿಸುತ ಶಾಕಿನಿಯರಿಗೌತಣ । ವುಣ್ಣಲು ಬಡಿಸುವೆನು ॥೩॥

ಲಕ್ಷ್ಮಣ:- ಅಗ್ರಜನೇ! ನನ್ನ ಪರಾಕ್ರಮದ ಪರಮಾವಧಿಯನ್ನು ಪೂರ್ಣ ತಿಳಿದಿರುವಾಗ ಹೀಗೇಕೆನ್ನುವೆ? ಆ ರಾಕ್ಷಸನು ಎಷ್ಟೇ ಸಮರ್ಥನಿರಲಿ, ವಿದ್ಯಾಬುದ್ಧಿಗಳಲ್ಲಿ ಎಷ್ಟೇ ಶ್ರೇಷ್ಠನಿರಲಿ, ಯಾವ ಯೋಗ್ಯತೆಯು ನನ್ನಲ್ಲಿ ನಡೆಯದು. ದೇವಾದಿದೇವನಾದ ನಿನ್ನನುಗ್ರಹವೂ ಜಿತೇಂದ್ರಿಯತ್ವದ ಶಕ್ತಿ ಸಾಮರ್ಥ್ಯವೂ ನನ್ನಲ್ಲಿರುವಾಗ ಶಾಕಿನಿ - ಡಾಕಿನಿ ಭೂತಗಣಗಳಿಗೆ ಆಹುತಿಕೊಟ್ಟು, ಅತಿಕಾಯನ ಹೆಸರು ವಸುಧೆಯಲ್ಲುಳಿಯದಂತೆ ಮಣ್ಣುಗೂಡಿಸಿ ಬಂದೇ ಬರುವೆನು. ಅಪ್ಪಣೆಯಾಗಲಿ!

ರಾಮ:- ಪ್ರಿಯ ಸಹೋದರನೇ! ಹೋಗು. ಜಯಶಾಲಿಯಾಗಿ ಬರುವಂತೆ ಆಶೀರ್ವದಿಸಿರುತ್ತೇನೆ.

ರಾಗ-ಶಂಕರಾಭರಣ । ಮಟ್ಟೆ-ತಾಳ

ಬಂದನಾ ಸೌಮಿತ್ರಿಯಣುಗನು ॥ ಮುಂದುವರಿವ ರಕ್ಕಸೇಂದ್ರನಂದನನೊಳು ಸಮರಕಂದು । ಬಿಲ್ಲು ಹಿಡಿದು ಕರದಿ ತಾನು ॥ ಬಂದನಾ ॥೧॥

ಲಕ್ಷ್ಮಣ:- (ಸ್ವ) ರಾಮಚಂದ್ರನ ಅಪ್ಪಣೆಯಾಯಿತು. ಕೈಯಲ್ಲಿ

ಧನುರ್ಬಾಣಗಳನ್ನಾಂತು; ವಾನರ ಪ್ರಮುಖರನ್ನು ಕೆಡಹಾಕಿ, ರಥಾರೂಢನಾಗಿ ಬರುವ ರಾಕ್ಷಸೇಂದ್ರನ ಸಮ್ಮುಖಕ್ಕೆ ಈಗಲೇ ಧಾವಿಸುವೆನು.

ದೇವತತಿಯು ಪೊಗಳೆ ಬಿಲ್ಲ | ಝೇವಡೆಯನು ಗೈಯುತುಗ್ರ | ಭಾವದಿಂದಲುಬ್ಬಿ ಸಿಂಹನಾದವನ್ನು ಗೈವುತೊಡನೆ ||೨||

ಲಕ್ಷ್ಮಣ:- ಯುದ್ಧ ಸನ್ನಹಗಳನ್ನು ಅಳವಡಿಸಿಕೊಂಡು ರಣಾಂಗಣಕ್ಕೆ ಸಮೀಪಿಸುವಾಗ ಇದೇನಾಶ್ಚರ್ಯ! ಪುಷ್ಪವೃಷ್ಟಿಯಾಗುತ್ತಿದೆ. ಆಕಾಶದಲಿದ್ದ ಸುಮನಸರು ವಿಮಾನಾರೂಢರಾಗಿ ಶಂಖಧ್ವನಿಗೆಯ್ದು ಜಯಘೋಷ ಮಾಡುತ್ತಿದ್ದಾರೆ ಸುರಮುನಿಗಳ ಹೊಗಳಿಕೆಯು ಕೇಳುವಂತಿದೆ. ಇದೆಲ್ಲ ಶುಭಶಕುನವೇ ಸರಿ ಕಪಿಸೈನ್ಯವು ಒಟ್ಟುಗೂಡಿ ಹಿಂಬಾಲಿಸಿ ಬರುವಂತೆ ಧನುಷ್ಟಂಕಾರಮಾಡಿ ದೈತ್ಯಾಧಮನ ಮುಂದೆ ಸಿಂಹಧ್ವಾನದಿಂದ ತಟ್ಟನೆ ಕಾಣಿಸಿಕೊಳ್ಳುತ್ತೇನೆ.

|| ಕಂದ ಪದ್ಯ ||

ಬರುವ ಸುಮಿತ್ರಾ ಸುತನಂ | ಹರಿವಂಶಜನೆಂಬ ಬಗೆಯ ನರಿತತಿಕಾಯಂ || ಭರದಿಂ ತನ್ನಯ ರಥಮಂ | ಹರಿಸುತಲಾಕ್ಷಣದಿ ಬಳಿಕ ವೀರನೊಳೆಂದಂ ||೧||

ಅತಿ:- (ಸ್ವ) ಸಮರೋದ್ಯುಕ್ತರಾಗಿ ರಭಸದಿಂದಿದಿರಾದ ಕಪಿವೀರರನ್ನೆಲ್ಲಾ ಒಂದೊಂದೇ ಕೂರ್ಗಣೆಗಳಿಂದ ನೆಲಕ್ಕುರುಳಿಸಿದಂತಾಯಿತು. ಇನ್ನು ರಣೋತ್ಸಾಹದಿಂದ ಪ್ರತಿಭಟಿಸುವವರಾರೋ ನೋಡೋಣ! ಇದ್ದರೆ ರವಿಕುಲೋತ್ಪನ್ನರಾದ ರಾಮಲಕ್ಷ್ಮಣರೇ ಸರಿ. ಓಹೋ! ಧನುರ್ಧಾರಿಯಾಗಿ ಯಾರೋ ಬರುವಂತಿದೆ. ಸಾಕ್ಷಾತ್ ಶ್ರೀರಾಮಚಂದ್ರನೋ, ಲಕ್ಷ್ಮಣನೋ ಇರಬೇಕು. ರಥಾರೂಢನಾಗಿ ಹೋಗಿ ವಿಚಾರಮಾಡುತ್ತೇನೆ.

ರಾಗ— ಸೌರಾಷ್ಟ್ರ | ತಾಳ— ತ್ರಿವುಡೆ

ಭಳಿರೆ ಬಲು ಭಟನೆಂಬುದರಿತೆನು | ತಳುವದೆನ್ನೊಳು ಪೇಳು ರಘುಕುಲ | ತಿಲಕನೋ ಲಕ್ಷ್ಮಣನೋ ಪೇಳಾ | ರಲಸದೀಗ ||೧||

ಅತಿ:- ಭಳಿರೆ ಶಹಭಾಸ್! ವೀರಾಧಿವೀರನೆ! ಸ್ವಲ್ಪಕಾಲ ಸೈರಿಸು. ನಿನ್ನ ಬರೋಣವನ್ನು, ರೂಪಾತಿಶಯವನ್ನು ದೂರದಿಂದ ನೋಡಿದೊಡನೆ ನೀನೊಬ್ಬ ಪಟುಭಟನೆಂಬುದು ಸ್ಪಷ್ಟವಾಯಿತು. ಆದರೆ ಮಹಾ ವಿಷ್ಣುವೇ

ರಘುವಂಶಕ್ಕೆ ತಿಲಕಪ್ರಾಯನಾದ ಶ್ರೀರಾಮನಾಗಿಯೂ, ಮಹಾಶೇಷನೇ ಲಕ್ಷ್ಮಣನಾಗಿಯೂ ಜನ್ಮವೆತ್ತಿದ ವಿಚಾರ ಈ ಮೊದಲೇ ತಿಳಿದ ಕಾರಣ ಹೀಗೊಂದು ಸಂದೇಹವುಂಟಾಗಿದೆ. ಅವರಿರ್ವರಲ್ಲಿ ನೀವಾರು? ಶ್ರೀ ರಾಮನೋ ಲಕ್ಷ್ಮಣನೋ ವಿದಿತವಾಗಲಿಲ್ಲ. ಏಕೆಂದರೆ ಮಣಿಕಿರೀಟ, ಯುದ್ಧಕವಚ, ಪೀತಾಂಬರಾದಿ ರಾಜಭೂಷಣಗಳಿಲ್ಲದೆ ನಾರು ಬಟ್ಟೆಯನ್ನುಟ್ಟು ಯುದ್ಧಕ್ಕೆ ನಿಂತಿರುವುದು ಆತ್ಯಾಶ್ಚರ್ಯವಿದೆ.

ಲಕ್ಷ್ಮಣ:- ಮಹಾಕಾಯನೇ! ಆಹವಕ್ಕೆದಿರಾದ ಮೇಲೆ ಈ ಪ್ರಶ್ನೆಗಳೇಕೆ?

ಎನಲು ಲಕ್ಷ್ಮಣನೆಂದ ನಿನ್ನಯ । ಮನಸಿನೊಳಗೇನೆಂದು ತೋರಿದ ।
ದನಿತು ಬಗೆಯಲು ಬಹುದು ನೀ ಕೇ । ಳೆನುತಲವಗೆ ॥೨॥

ಲಕ್ಷ್ಮಣ:- ರಾಕ್ಷಸೇಂದ್ರನೆ! ನಿನ್ನ ವಾಕ್ಯಾರ್ಥವನ್ನು ಗ್ರಹಿಸುವಾಗ ರಾಕ್ಷಸರಲ್ಲಿ ನೀನೊಬ್ಬ ಬುದ್ಧಿಜೀವಿಯಹುದು. ಆದರೆ ವಿಧಾತ್ರನು ವಿಧಿಸಿದಂತೆ ಪಿತೃವಾಕ್ಯ ಪರಿಪಾಲನಾರ್ಥವಾಗಿ ಕಾಡನ್ನು ಸೇರಿದ ಮೇಲೆ ನಮಗಾ ರಾಜಭೂಷಣಗಳೇಕೆ? ಪೂರ್ವಿಕರ ಆದರ್ಶದಂತೆ ದುಷ್ಟರನ್ನು ತಿದ್ದಿ, ಶಿಷ್ಟರನ್ನು ರಕ್ಷಿಸುದ ಸತ್ಕಾರ್ಯವೇ ನಮ್ಮದಾಗಿರುವಾಗ ಯಾವ ಪ್ರಶ್ನೆಗಳಿಗೂ ಅವಕಾಶವಿಲ್ಲ. ನೀನು ನಿನ್ನ ಮನಸ್ಸಿನಲ್ಲಿ ರಾಮನೋ ಲಕ್ಷ್ಮಣನೋ ಯಾವ ರೂಪಿನಿಂದ ಕಾಣುತ್ತೀಯೋ ಅವನೇ ನಾನೆಂದು ತಿಳಿದುಕೋ!

ರಣಕೆ ದಾನವನಾದರೇನಾ । ಯ್ತೆಣಿಕೆ ನಮಗಿಲ್ಲಲವೊ ಸಮರಾಂ ।
ಗಣದೊಳಾತ್ಮ ನಿವೇದಕರು ನಾವ್ । ಚಿನುಮಯಂಗೆ ॥೩॥

ಅತಿ:- ಪ್ರತಿಭಟನೆ! ಹೆದರಿದೆನೆಂದರಿತೆಯಾ? ಜೀವದಾಸೆಯಿಂದ ದೇಹಾಭಿಮಾನದಿಂದ ಹೊಯ್ದಾಟಕ್ಕೆ ಆಶಕ್ತನಾಗಿ ಪ್ರಶ್ನೆಹಾಕಿಲ್ಲ. ಭಾವನೆಗೆ ಸರಿಯಾದ ಫಲವಿದ್ದರೂ ದೇವರನ್ನು ಸಾಕ್ಷಾತ್ಕರಿಸುವುದಕ್ಕೆ ಸುಲಭೋಪಾಯವೆಂಬ ಸದ್ಭಾವದಿಂದ ಯಾರು ನೀನೆಂದು ಕೇಳಿದೆ ತಪ್ಪಾಯಿತೇ? ಇರಲಿ. ಈ ಅತಿಕಾಯನು ನವವಿಧ ಭಕ್ತಿಭಾವಗಳಿಂದ ಪರಮಾತ್ಮನನ್ನು ಪ್ರಸನ್ನಗೊಳಿಸಲು ಸದಾ ಪ್ರಯತ್ನಿಸುತ್ತಿರುವ ಪರಮ ಭಕ್ತನು ದೈವೇಚ್ಛೆಯಿಂದ ಸಂಪ್ರಾಪ್ತವಾದ ಸಮರ ನಿಮಿತ್ತವಾಗಿ ಈ ಮಹಾ ಪಾರ್ಥಿವ ಕಾಯವನ್ನು ಕಳಚಿ ಆತ್ಮಾರ್ಪಣ ಮಾಡಲು ಸಿದ್ಧನಿರುವಾಗ ಇದಿರಾಗಿದ್ದ

ವನು ರಾಮನಾದರೇನು? ಲಕ್ಷ್ಮಣನಾದರೇನು? ಪರಬ್ರಹ್ಮನೇ ಇರಲಿ ಭಯವಿಲ್ಲ.

ಲಕ್ಷ್ಮಣ:- ತಿಳಿಯಿತು. ಈ ಯುದ್ಧದಲ್ಲಿ ನಿನ್ನ ಯೋಜನೆಯೇನು? ಕಾದಾಡುವ ಬಗೆ ಹೇಗೆ?

ತೋರುವೆನು ಸುರನಿಕರ ನೋಡಲು । ಭೂರಿ ರಣಕೌಶಲ್ಯಗಳನಾ । ವೀರನಾದರೆ ನಿಲ್ಲೆನುತ ಖಳ । ನಾರು ಭಟಿಸೇ ||೪||

ಅತಿ:- ವೀರಾಗ್ರೇಸರನೇ! ಹೇಳಬೇಕಾದುದೇನು? ಯಮಸಮುದ್ರವನ್ನೊಂದುವ ರಕ್ತವಾಹಿನಿಯನ್ನು ಪೊಡಲಾಗಿ ನಿರ್ಮಿಸಿರುವೆ. ಆದರೆ ಕಪಿ ಕಟಕದೊಡನೆ ಕಾದಾಡುವ ಇಚ್ಛೆಯೂ ನನಗಿಲ್ಲ. ನಿನ್ನಲ್ಲಿ ಸತ್ವಸಾಹಸಗಳಿದ್ದರೆ ಇದಿರಾಗಿ ನಿಲ್ಲು! ಗಗನಾಂಗಣದಲ್ಲಿರುವ ಗರುಡ ಗಂಧರ್ವಾದಿ ದೇವತತಿಗಳು ಮೆಚ್ಚುವ ಹಾಗೆ ನನ್ನೀ ಯುದ್ಧವಿದ್ಯಾ ನೈಪುಣ್ಯವನ್ನು ಶಸ್ತ್ರಾಸ್ತ್ರಗಳ ಮೂಲಕ ಪ್ರಕಟಪಡಿಸುತ್ತೇನೆ. ಇದೋ ನಾನು ಪ್ರಯೋಗಿಸುವ ಕಳಂಬಗಳ ತೀಕ್ಷ್ಣತೆಯನ್ನು ಪರೀಕ್ಷೆಮಾಡಿ ನೋಡಬಹುದು.

ಲಕ್ಷ್ಮಣ:- ಅತಿಕಾಯ! ಮಾತಿಗಿಂತ ಕೃತಿ ಮೇಲು. ಮೊದಲು ಬಂದ ರಾಕ್ಷಸಾಧಮರ ಗತಿಯೇನಾಯ್ತೆಂದು ಬಲ್ಲೆಯಾ?

ರಾಗ--ಪಂತುವರಾಳಿ । ಮಟ್ಟೆ—ತಾಳ

ಬಳಿಕ ಏನನೆಂಬೆ ಲಂಕೆ । ಯೊಳ್ದಸಣುಗನು || ಬಲು ಶರಾಳಿಯನ್ನು ಬಿಡಲು । ರಾಮನನುಜನು || ತಳವಡದನು ಕೊಚ್ಚಿ ಮಗುಳೆ । ರಾತ್ರಿಚರನನು || ಹೊಳೆವ ಕಣೆಗಳಿಂದಲಿಚ್ಚು । ಹೂಂಕರಿಸಿದನು ||೧||

ಅತಿ:- ಮಾನವಾಗ್ರಣಿಯೇ! ಸೋಲು ಗೆಲವು ದೈವಾದೀನ, ಆದರೂ ಪೌರುಷಪ್ರದರ್ಶನವು ಗಂಡುಗಳ ಲಕ್ಷಣ. ಆದರಲ್ಲೂ ಭುಜಬಲದಿಂದ ಬಿಡಲ್ಪಡುವ ನನ್ನೀ ನಿಶಿತಾಸ್ತ್ರಗಳ ರಭಸವನ್ನು ಭೂಮಿ, ಅಂತರಿಕ್ಷ, ಹೈಮಾದ್ರಿಯೂಗಲಿ ಸಹಿಸಲಾರವು. ಅದರ ಪರೀಕ್ಷಾರ್ಥವಾಗಿ ಈಗ ಬಿಡುವ ಬಾಣಾವಳಿಯನ್ನು ಕತ್ತರಿಸುವ ಸಾಮರ್ಥ್ಯವಿದ್ದರೆ ಇದಿರಾಗಿ ನಿಲ್ಲು!

ಲಕ್ಷ್ಮಣ:- ಲಂಕಾಧಿಪತಿ ರಾವಣೇಶ್ವರನ ಮಗನೆ! ನಿನ್ನ ಬಾಣಗಳು ಯಾವ ಲಕ್ಷ್ಯ. ಆ ಬಾಣಗಳನ್ನೆಲ್ಲ ಮಧ್ಯ ಮಾರ್ಗದಲ್ಲಿ ತುಂಡರಿಸಿ,

ಥಳಥಳನೆ ಹೊಳೆಯುವ ಪ್ರತ್ಯಸ್ತ್ರಗಳನ್ನು ಶರಾಸನದಿಂದೆತ್ತಿ ಹೂಡುತ್ತಿದ್ದೇನೆ. ನೋಡು.

ಎಸೆದ ಬಾಣಗಳನು ತರಿದು । ಯಾತುದಾನನು ॥ ಉಸುರಲೇನು ಅಕ್ಷಯಾಸ್ತ್ರ । ದಿಂದಲಿವನನು ॥ ದೆಸೆಗಳೆಲ್ಲ ತೋರಬಾರ । ದೆಂಬತೆರದಲಿ ॥ ಮುಸುಕಿಸಿಂಹನಾದ । ವನ್ನು ಗೈದನಿದಿರಲಿ ॥೨॥

ಅತಿ:- ಎದೆಗಾರನೆಯೇ! ನಿನ್ನ ಬಾಣಗಳು ಈಗೆಲ್ಲಿ ಹೋದವು? ವೃಥಾ ಹೆಮ್ಮೆಯಿಂದ ಹಿಗ್ಗಿಕೊಳ್ಳಬೇಡ. ಇನ್ನು ಪ್ರಯೋಗಿಸುವ ಬಾಣದ ಪ್ರಭಾವ ವೇನೆಂದು ಬಲ್ಲೆಯಾ? ಒಂದಕ್ಕೆ ಹತ್ತಾಗಿ, ಹತ್ತಕ್ಕೆ ನೂರಾಗಿ ಮತ್ತೆ ಸಾವಿರವೊ ಲಕ್ಷವೊ ಅಸಂಖ್ಯಾತವಾಗಿ ಮುಸುಕಲ್ಪಡುವ ಅಕ್ಷಯಾಸ್ತ್ರವಿದೆ. ಪ್ರತ್ಯಸ್ತ್ರಗಳಿದ್ದರೆ ಕತ್ತರಿಸುವವನಾಗು.

ಗಣಿಸದದನು ವೀರ ಶ । ತ್ರುಘ್ನನಣ್ಣನು । ಕ್ಷಣದಿ ಪ್ರತಿಶರಾಘದಿಂದ । ಕೊಚ್ಚಲಾತನು ॥ ತಣಿಯದಿವನ ಸತ್ವವೆಂತು । ಟೆನುತ ತೆಗೆದನು ॥ ಕ್ಷಣದಿ ಸುರರು ಬೆದರೆ ಘೋರ । ವಹ್ನಿ ಶರವನು ॥೩॥

ಲಕ್ಷ್ಮಣ:- ರಾಕ್ಷಸೇಂದ್ರನೇ! ನಿನ್ನ ಶರಗಳು ಲಕ್ಷವಾಗಲಿ, ಅಕ್ಷಯವಾಗಲಿ ಲಕ್ಷ್ಯವಲ್ಲ. ಧನುರ್ವೇದದಲ್ಲಿ ಪ್ರಾಜ್ಞನಾದ, ಶಸ್ತ್ರಾಸ್ತ್ರ ಪ್ರಯೋಗದಲ್ಲಿ ತಜ್ಞನಾದ ನನಗಾವುದೂ ಗಣ್ಯವಲ್ಲ. ಮೇಲೆ ನೋಡಿದೆಯಾ - ದೇವಗಣವೇ ಬೆಪ್ಪಾಗಿ ನಿರೀಕ್ಷಿಸುವಂತೆ ಅಮೋಘಾಸ್ತ್ರಗಳಿಂದ ಕತ್ತರಿಸಿ ಬಿಟ್ಟಿರುತ್ತೇನೆ

ಅತಿ:- ಭಲಾ ಶಹಭಾಸ್! ನೀನೊಬ್ಬ ವೀರಾಧಿವೀರನೇ ಸರಿ. ಅಕ್ಷಯಾಸ್ತ್ರವು ನಿಷ್ಫಲವಾದರೇನು? ಬ್ರಹ್ಮನ ವರ ಬಲೋತ್ಸಾಹದಿಂದ ಅಜೇಯನಾದ ನಾನು ದುರ್ಬಲನಾದನೆಂದೆಣಿಸಬೇಡ. ಬತ್ತಳಿಕೆಯಲ್ಲಿ ಸುಪ್ತವಾಗಿರುವ ಆಗ್ನೇಯಾಸ್ತ್ರವಿರುವಾಗ ಹೆದರುವ ಹಾಗುಂಟೇ?

ರಾಗ-ಮಾರವಿ । ಏಕ-ತಾಳ

ಆಗಸುತ ಕೇಳಾ । ಶುಗ ಸಖ ಬಾಣವ । ತೆಗೆದು ಬಿಡಲು ಧಗ । ಧಗಿಸುತ ಕಿಡಿಗಳ । ನುಗುಳುತ ಬಂದುದು । ರಘುಪತಿಯನುಜನ । ಹೊಗೆಯಲಿ ಮುಸುಕಿತು । ಭುಗಿಭುಗಿಲೆನುತ ॥೧॥

ಅತಿ:- ರಾಜಕುಮಾರನೆ! ಅಲ್ಲೇ ನಿಲ್ಲು. ನೀನೂ ನಿನ್ನ ವಾನರ

ಸೈನ್ಯವೂ ಕಣ್ಬಿಟ್ಟು ನೋಡುತ್ತಿರುವಂತೆ ಕ್ಷಣಾರ್ಧದಲ್ಲಿ ಸುಟ್ಟೇ ಬಿಡುವಂತಹ ಅಗ್ನ್ಯಸ್ತ್ರವನ್ನು ಅಭಿಮಂತ್ರಿಸಿ ಬಿಡುತ್ತಿದ್ದೇನೆ. ಈ ಶರವು ಸಪ್ತಜ್ವಾಲೆಗಳಿಂದ ಧಗಧಗಿಸುತ್ತಾ ಝಂಝೂವಾತದಂತೆ ಧಾವಿಸಿ ಬರುತ್ತಿರುವಾಗ ಅದಕ್ಕೆ ತಕ್ಕ ಪರಿಹಾರವನ್ನು ಈಗಲೇ ಕಂಡುಕೊಳ್ಳುವವನಾಗು.

ಲಕ್ಷ್ಮಣ:– (ಸ್ವ) ಶಿವ ಶಿವಾ! ದಿಗ್ದೆಸೆಯೂ ಆಕಾಶವೂ ಕಾಣದಂತೆ ಧೂಮರಾಶಿಯು ಸುತ್ತಲೂ ಹುಸುಕುತ್ತಿರುವುದು. ಕಪಿವೀರರು ಭಯಭ್ರಾಂತಿಯಿಂದ ಉಬ್ಬಸಪಡುವಂತೆ, ದೇವತೆಗಳು ಆಶ್ಚರ್ಯಚಕಿತರಾಗಿ ಕಂಪಿಸುತ್ತಿರುವರು. ಆದರೇನು? ರಾಮನ ಅನುಗ್ರಹವಿರುವಾಗ ನಿರುಪಾಯನಾಗಬಲ್ಲೆನೇ?

ಉರಿಗೆದುರುತಲೈ । ತರುವ ಮಹಾಸ್ತ್ರವ! ತರುಣಿ ಕುಲೋದ್ಭವಾ । ವರಜನು ಕಾಣುತ । ತ್ವರಿತದಿ ವಾರುಣ । ಶರವನು ಬಿಡಲೊಂ । ದರೆ ನಿಮಿಷದೊಳದ । ಪರಿಹರಿಸಿದನು । ಏನನೆಂಬೆ ॥೨॥

ಲಕ್ಷ್ಮಣ:– (ಸ್ವ) ವಿರೋಧಿಯ ಅಗ್ನಿಶರವು ವಿಚ್ಛೇದನವಾಗುವಂತೆ ಜಲಾಸ್ತ್ರವನ್ನು ಹೂಡುತ್ತೇನೆ. ಅತಿಕಾಯನೆ! ಬೆಂಕಿಯ ಪ್ರಭಾವವು ಜಲಾಧಿಪತಿಯ ಮುಂದೆ ನಡೆಯುವುದೇನು? ನೋಡಿದೆಯೊ! ನಿನ್ನ ಆಗ್ನೇಯಾಸ್ತ್ರವು ಕಿಡಿಗೆದರುತ್ತಾ ಬರುವಾಗಲೇ ಜಲಾಸ್ತ್ರದ ಮೂಲಕ ನಂದಿಸಿರುವೆನು. ಇನ್ನಾವ ಶರಗಳಿವೆಯೋ ಶೀಘ್ರವಾಗಿ ಬರಲಿ!

ತಿರುಗಿ ನಿಶಾಚರ । ಉರಗಾಸ್ತ್ರವ ಜಡೆ । ಗರುಡಕಳಂಬದಿ ತರಿವುತಲದ ಬಳಿ । ಕುರು ತಿಮಿರಾಸ್ತ್ರವ । ಸಿಡಿ ತುಡುಕಲಿನ । ಶರದಿಂದರಿದನು । ಬಳಿಕಾ ಲಕ್ಷ್ಮಣ । ಏನನೆಂಬೆ ॥೩॥

ಅತಿ:– ಎಲೋ ವೀರನೆ! ಶತ್ರುವಾದರೂ ನಿನ್ನ ಶರ ಪ್ರಯೋಗಕ್ಕಾಗಿ, ಕರಚಮತ್ಕಾರಕ್ಕಾಗಿ ಶತಶಃ ಶ್ಲಾಘಿಸಲೇ ಬೇಕು. ಅದಕ್ಕಾಗಿ ದರ್ಪದಿಂದುಬ್ಬಬೇಡ. ಅಂತಹ ದರ್ಪವಿದ್ದರೆ ಇದೋ ಸರ್ಪಾಸ್ತ್ರದಿಂದ ಮುರಿದು ಬಿಡುತ್ತೇನೆ.

ಲಕ್ಷ್ಮಣ:– ಎಲೋ ನಿಶಾಚರನೇ! ಆ ಮಾತು ಬಿಡು. ನಿನ್ನ ಸರ್ಪಾಸ್ತ್ರವನ್ನು ಗರುಡನೇ ಬಂದು ಕಬಳಿಸುವ ಹಾಗೆ ಗರುಡಾಸ್ತ್ರವನ್ನು ಅಭಿಮಂತ್ರದ್ವಾರಾ ಎಸೆದಿರುವೆನು.

ಅತಿ:- ಸರ್ಪಾಸ್ತ್ರವು ವ್ಯರ್ಥವಾಯಿತೇ? ಇನ್ನು ಪ್ರಳಯ ಕಾಲದ ಅಂಧಕಾರವೇ ಮುಸುಕುವ ಹಾಗೆ ತಿಮಿರಾಸ್ತ್ರದ ಮೂಲಕ ಕಾರ್ಗತ್ತಲೆಯನ್ನೇ ಕವಿಸಿಬಿಡುತ್ತೇನೆ.

ಲಕ್ಷ್ಮಣ:- (ಸ್ವ) ಇದೇನಾಶ್ಚರ್ಯ! ಭಾಸ್ಕರನ ತೇಜೋ ರಾಶಿಯು ಕಾಣದಂತೆ ಜಗತ್ತೆಲ್ಲವೂ ಕತ್ತಲೂ ಕವಿದಿದೆ. ನೋಡಿದರೆ ಭೂವ್ಯೋಮಗಳ ಅಂತರವೂ ತಿಳಿಯದಾಗಿದೆ. ಇರಲಿ. ರಘುಕುಲಕ್ಕೆ ಮೂಲಪುರುಷನಾದ ಸೂರ್ಯನಾರಾಯಣನನ್ನು ಧ್ಯಾನಿಸಿ ಸೂರ್ಯಾಸ್ತ್ರವನ್ನು ಪ್ರಯೋಗಿಸಿಬಿಡುತ್ತೇನೆ.

॥ ಭಾಮಿನಿ ॥

ಇಂತು ಬಹು ವಿಧದಸ್ತ್ರಚಯವ ಅ। ನಂತವಂಶಜನಿರದೆ ಖಂಡಿಸ। ಲಂತರಂಗದೊಳೆಂದ ಗಹಗಹಿಸುತ್ತಲತಿಕಾಯ ॥ ಎಂತು ನಮ್ಮಸ್ತ್ರಗಳು ಹರಿದಸು। ರಾಂತಕಾತ್ಮನೊಳಕಟ ಬರಿದೇ। ಭ್ರಾಂತನೆಂದರಿದತು ಮತ್ತಿಂತೆಂದನವನೊಡನೆ ॥೧॥

ಅತಿ:- ಕಾಲಚಕ್ರದ ಪರಿಭ್ರಮಣವು ಅತ್ಯಾಶ್ಚರ್ಯವಿದೆ. ಆದುದರಿಂದ ಅಚೇತನ-ಸಚೇತನವಾಗಿ, ಸಚೇತನ-ಅಚೇತನವಾಗಿ ಪರಿಣಮಿಸುವುದು ನಿಶ್ಚಯ. ನೋಡಿದರೆ ಪ್ರತಿಭಟಿಸಿದ ವೀರನು ನರನಂತಿದ್ದರೂ ಮುಗಿಲ ಮರೆಯ ರವಿಯಂತೆ, ಒರೆಯ ಮರೆಯ ಅಲಗಿನಂತೆ ಬೆಳಗೆಲ್ಪಡುವ ವಿಭೂತಿ ಪುರುಷನು. ಇಂತಹರ ವಿದ್ವೇಷದಿಂದ ಬದುಕುವವರಾರು? ಏಕೆಂದರೆ ಬ್ರಹ್ಮಾದಿ ದೇವತೆಗಳಿಗೂ ಅಜೇಯನಾದ ನನ್ನೀ ಬತ್ತಳಿಕೆಯ ಮಹಾಸ್ತ್ರಗಳೆಲ್ಲ ವ್ಯರ್ಥವಾದುವು. ಸೂರ್ಯೋದಯದಿಂದ ಮರೆಯಾಗುವ ಕತ್ತಲೆಯಂತೆ ನನ್ನಲ್ಲಿದ್ದ ಅಹಂಕಾರಯುಕ್ತವಾದ ಸತ್ವಾತಿಶಯವೆಂಬ ಕತ್ತಲೆಯು ಅಡಗಿಹೋಯಿತು. ಇನ್ನು ದುರಭಿಮಾನದಿಂದ ದಿಗ್ಭ್ರಾಂತನಾಗಿ ಗೆದ್ದೇಬಿಡುವೆನೆಂದು ಪಂಥಕಟ್ಟಿದರೆ ಏನುಫಲ? ಯೋಗ್ಯತಾಯೋಗ್ಯತೆಗಳ ಪರೀಕ್ಷೆಮಾಡದ ಮೇಲೆ ಯುದ್ಧ ಹೂಡುವುದು ನ್ಯಾಯವಲ್ಲ. ಆದರೆ ಜನಕನಿಂದಾಜ್ಞಪ್ತನಾಗಿ ಯುದ್ಧಕ್ಕೆ ಬಂದ ಮೇಲೆ ಸುಮ್ಮನಿರುವುದು ಹೇಗೆ? ಯೋಚಿಸುವ!

ಲಕ್ಷ್ಮಣ:- ಏನು ಯುದ್ಧಮಾಡದೇ ನಿಶ್ಶಬ್ದನಾಗಿ ಬಿಟ್ಟೆಯಲ್ಲ!

ಯೂನಾಲೋಚನೆ?

॥ ಭಾಮಿನಿ ॥

ನೀವು ಜಗದಧಿ ದೈವವೆಂಬುದ। ಭಾವ ಶುದ್ಧದಿ ಬಲ್ಲೆವೈ ಸ್ವ। ಭಾವ ವನು ಬಿಡಬಹುದೆ ನಿಜಕುಲ ಪೂರ್ವಪದ್ಧತಿಯ ॥

ಅತಿ:- (ಸ್ವ) ತನುವಿನಲ್ಲಿ ನಿರ್ಮೋಹಕರಾಗಿ, ಮನದಲ್ಲಿ ನಿರಪೇಕ್ಷ ಕರಾಗಿ, ಪ್ರಾಣದಲ್ಲಿ ನಿರ್ಭಯರಾಗಿ, ಚಿತ್ತದಲ್ಲಿ ನಿರಹಂಕಾರಿಗಳಾಗಿ, ವಿಷ ಯದಲ್ಲಿ ಉದಾಸೀನರಾಗಿ, ಜ್ಞಾನದಲ್ಲಿ ಸದಾನಂದರಾಗಿ ಇರತಕ್ಕವರೇ ಜ್ಞಾನಿಗಳು. ಇಂತಹ ಪುರುಷರು ತಮ್ಮ ಕರ್ತವ್ಯಗಳನ್ನು ಪರಮಾತ್ಮನಿಗೆ ಅರ್ಪಣಮಾಡುವುದೇ ಅರ್ಪಣ ತತ್ವ. ಈ ತತ್ವವು ಸಾಧಕನಲ್ಲಿರುವ ಅಹಂ ಕಾರದ ಕಸವನ್ನು ಕಿತ್ತು, ಮನದಲ್ಲಿ ನಿಷ್ಕಾಮಕರ್ಮದ ಬೀಜ ಬಿತ್ತುವುದು. ಹಾಗೆ ಸಮಾಜದ ಆದರ್ಶ ದೃಷ್ಟಿಯಿಂದ ಕಾಯಕತತ್ವವು ಮಹತ್ವವಿದೆ. ಇಲ್ಲಿ ನಾನು ಪರಮಾತ್ಮನಿಗೆ ಸರ್ವಸ್ವವನ್ನು ಅರ್ಪಣಮಾಡಲಿಕ್ಕಾಗಿ ಬಂದಿರು ವಾಗ ನನ್ನೀ ನಿಜಸ್ಥಿತಿಯನ್ನು ವ್ಯಕ್ತಪಡಿಸುವುದು ಅತ್ಯಗತ್ಯ.

ವೀರಾಧಿವೀರನೆ! ನೀವು ಸಾಮಾನ್ಯ ಮನುಷ್ಯರಲ್ಲ. ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನೂ ಸಾಧು ಸಜ್ಜನರನ್ನೂ ರಕ್ಷಿಸುವ ಮಹಾಪುರುಷರು. ಜಗತ್ತಿನಲ್ಲಿ ಸತ್ಯಧರ್ಮಗಳನ್ನು ಸ್ಥಾಪಿಸುವುದಕ್ಕಾಗಿ ಅವತಾರವೆತ್ತಿದ ಅಧಿ ದೇವರು. ಈ ವಿಚಾರವನ್ನು ನಾನೇನು ತಿಳಿಯದವನಲ್ಲ. ಆದರೂ ಪೂರ್ವ ಜರ ಹೇಳಿಕೆಯಂತೆ ತಂದೆಯ ವ್ರತವನ್ನು ಮಕ್ಕಳೂ ನಡೆಸಬೇಕೆಂಬ ನ್ಯಾಯಕ್ಕನುಸಾರವಾಗಿ ನಮ್ಮ ತಂದೆಯವರು ಕೈಕೊಂಡ ರಣಯಜ್ಞಕ್ಕೆ ಸಹಭಾಗಿಯಾಗಿ ವರ್ತಿಸಬೇಕಾಯಿತು. ಅಲ್ಲದೆ ಮಾನವರಿಗೆ ವಿರೋಧಿಗ ಳಾದ ರಾಕ್ಷಸರ ಸ್ವಭಾವಕ್ಕೊಪ್ಪುವಂತೆ ಯುದ್ಧರಂಗಕ್ಕೂ ಬರಬೇಕಾಯಿತು. ರಣಮಧ್ಯದಲ್ಲಿ ಮನುಷ್ಯರಾದವರು ಎಷ್ಟೇ ಪರಾಕ್ರಮಿಗಳಾಗಿದ್ದರೂ ಸ್ವಧ ರ್ಮಕ್ಕೆ ಸರಿಯಾಗಿ ಹೋರಾಡಬೇಕಾಯಿತು. ಏಕೆಂದರೂ ಜಾತಿ ಸ್ವಭಾವ, ಕುಲಗೌರವ, ವಂಶಪದ್ಧತಿಗಳನ್ನು ಬಿಡುವುದಕ್ಕೆ ಯಾರಿಗೆ-ಹೇಗೆ ಸಾಧ್ಯ ವಿದೆ?

ಲಕ್ಷ್ಮಣ:- ತೊಡಗಿದ ಯುದ್ಧವನ್ನು ಮುಂದರಿಸಬಹುದಲ್ಲಾ! ತಟ ಸ್ಥನಾಗುವುದೇಕೆ?

ಅತಿ:- ದೇವ! ತಾವು ದೇವರು. ದೇವಾಂಶ ಸಂಭೂತರೆಂಬ ಜ್ಞಾನೋದಯವಾದ ಮೇಲೆ ಕಾದಾಡುವುದು ಹೇಗೆ?

ಲಕ್ಷ್ಮಣ:- ಯುದ್ಧದಿಂದ ವಿಮುಕ್ತನಾದರೆ ಮತ್ತೇನು ಮಾಡುವೆ?

॥ ಭಾಮಿನಿ ॥

ನಾವು ಮಾಡುವ ಸಮರ ಮುಖ ಸಂ । ಭಾವನೋಚಿತ ಸರಳ ಭಕ್ತಿಯು । ನೀವು ಕೈಕೊಳಬೇಕೆನುತ ತೆಗೆದಿಸುತಲಿಂತೆಂದ ।೧॥

ಅತಿ:- ಪರಂತಪನೆ! ರಣಾಂಗಣಕ್ಕೆ ಬರುವಾಗ ಶಸ್ತ್ರಾಸ್ತ್ರ ಮೊದಲಾದ ಯುದ್ಧಸನ್ನಾಹಗನ್ನು ಬಂಡಿಯಲ್ಲಿಟ್ಟು ಬಂದಿರುತ್ತೇನೆ. ಪೂಜಾ ಸಾಮಗ್ರಿಗಳನ್ನು ಸಂಗ್ರಹಿಸಿ ತರಲಿಲ್ಲ. ಈಗ ದೇವರಾದ ತಮ್ಮ ಪಾದವನ್ನರ್ಚಿಸಿ ಕೃತಾರ್ಥನಾಗಬೇಕೆಂಬ ಇಚ್ಛೆಯುಂಟಾಗಿದೆ. ತಕ್ಕ ಸನ್ನಾಹಗಳಿಲ್ಲವಾದರೂ ಇದ್ದ ವಸ್ತುಗಳನ್ನರ್ಪಿಸಿ ಆರಾಧಿಸಿದರೆ ಪರಮಾತ್ಮನು ಪ್ರಸನ್ನನಾಗುವನೆಂಬ ಶಾಸ್ತ್ರೋಕ್ತಿಯಿದೆ. ಆಮಾತು ಸತ್ಯವಾದರೆ ಸಂಗ್ರಾಮ ಮುಖದಲ್ಲಿ ನಾನು ಮಾಡುವ ಶರಳಭಕ್ತಿಯು ಷೋಡಶೋಪಚಾರ ಪೂಜೆಯನ್ನು ಕೈಕೊಳ್ಳಬೇಕಾಗಿ ಬೇಡಿಕೊಳ್ಳುತ್ತೇನೆ.

ಲಕ್ಷ್ಮಣ:- ಅತಿಕಾಯ! ಭಕ್ತಿಯುಕ್ತವಾದ ಪೂಜಾ ಫಲವು ಶೀಘ್ರದಿಂದೊದಗುವುದು. ಇಷ್ಟವಿದ್ದಂತಾಗಲಿ!

ರಾಗ—ಮಾರವಿ । ಏಕ— ತಾಳ

ಇದೆ ಆವಾಹನೆ ನೋಡು । ಮ-ತ್ತಿದೆ ಆಸನ ದಯೆಮಾಡು । ಇದೆ ಪಾದ್ಯಾರ್ಘ್ಯಾದಿಗಳು । ನೋಡಿದೊ ನಿನಗುಪಚಾರಗಳು ।೧॥

ಅತಿ:- ಸ್ವಾಮಿ! ಗಂಧ, ಅಕ್ಷತೆ, ಪತ್ರ, ಪುಷ್ಪ, ಫಲ ಇತ್ಯಾದಿ ಯಾವ ಪೂಜಾಸಾಧನಗಳು ಇಲ್ಲಿಲ್ಲ ಶರಳುಗಳಿಂದರ್ಚಿಸುವ ಆರಾಧನೆಯಿದು. ಸ್ವೀಕರಿಸೋಣಾಗಲಿ! ಇದೋ ಮೊದಲೆಸೆದ ಶರವೇ ಆವಾಹನೆ, ಎರಡನೆ ಶರ ಆಸನ, ಮೂರನೆ ಶರ ಪಾದ್ಯ, ನಾಲ್ಕನೆ ಶರ ಅರ್ಘ್ಯ, ಐದನೆ ಶರ ಆಚಮನೀಯ, ಆರನೆ ಶರ ಸ್ನಾನ, ಏಳನೆ ಶರ ವಸನ, ಎಂಟನೆ ಶರ ಯಜ್ಞೋಪವೀತ, ಒಂಭತ್ತನೆ ಶರ ಗಂಧ, ಹತ್ತನೆ ಶರ ಅಕ್ಷತ, ಹನ್ನೊಂದನೆ ಶರ ಪುಷ್ಪ, ಹನ್ನೆರಡನೇ ಶರ ಧೂಪ, ಹದಿಮೂರನೆ ಶರ ದೀಪ, ಹದಿನಾಲ್ಕನೆ ಶರ ನೈವೇದ್ಯ, ಹದಿನೈದನೆ ಶರ ನೀರಾಜನ, ಹದಿನಾರನೆ ಶರ ಪ್ರದಕ್ಷಿಣ ನಮಸ್ಕಾರಾದ್ಯುಪಚಾರಗಳು.

ಎನುತೀರೆಂಟು ಶರವನು । ರಾ-ಮನ ತಮ್ಮನ ಮೇಲವನು। ಘನತರ ಭಕ್ತಿಯೊಳಾಗ । ಎಚ್ಚನು ಕೊಳ್ಳೆನುತತಿಬೇಗ ||೨||

ಅತಿ:- ದೇವನೇ! ಶ್ರದ್ಧಾಭಕ್ತಿಗಳಿಂದ ಷೋಡಶೋಪಚಾರ ಪೂಜೆಗಳನ್ನು ಈರೆಂಟು ಶರಗಳಿಂದ ನಡೆಸಿದ್ದಾಯಿತು. ಪ್ರೇಮವಾತ್ಸಲ್ಯದಿಂದ ಕೈಕೊಂಡು ಸುಪ್ರಸನ್ನರಾಗಿ ಅನುಗ್ರಹಿಸುವಂತೆ ಪ್ರಾರ್ಥಿಸುತಿದ್ದೇನೆ.

ನಿಶ್ಚಲ ಭಕ್ತಿಯೊಳವನು । ತೆಗೆ-ದೆಚ್ಚಾ ಶರಗಳನವನು । ಕೊಚ್ಚಡೆ ಮೈಯಲಿ ಧರಿಸಿ । ಮನ-ಮೆಚ್ಚಿ ನುಡಿದನುತ್ತರಿಸಿ ||೩||

ಲಕ್ಷ್ಮಣ:- ಅತಿಕಾಯನೆ! ಮೆಚ್ಚಿದೆ. ನಿನ್ನ ಶ್ರದ್ಧಾಭಕ್ತಿಯು ನಿಚ್ಚಲವಿದೆ. ಉಚ್ಚರಿಸಿದೊಡನೆ ನೀನು ನಡೆಸಿದ ಪೂಜಾವಿಧಾನಕ್ಕಾಗಿ ಸಂತೋಷಹೊಂದಿದೆ. ನೋಡಿದೆಯಾ! ನೀನೆಚ್ಚ ಕೂರಂಬುಗಳನ್ನು ಅಂಗಾಂಗಗಳಲ್ಲಿ ಧರಿಸಿರುತ್ತೇನೆ. ಇನ್ನು ಹೃತ್ಪೂರ್ವಕವಾಗಿ ಹೇಳುವ ಒಂದೆರಡು ವಾಕ್ಯಗಳನ್ನು ಕೇಳುವವನಾಗು!

ಅತಿ:- ದೇವ! ಮನಃತೃಪ್ತಿಯಾಯಿತೇ?

ಅಸಮ ಭಕುತ ನೀನಹುದೈ! ರಣ-ಕುಶಲಾನ್ವಿತ ನೀನಹುದೈ. ಅಸುರಾರಿಯ ಪದದಾಣೆ । ರಕ್ಕಸರೊಳು ನಿನಗೆಣೆ ಕಾಣೆ ||೪||

ಲಕ್ಷ್ಮಣ:- ರಾಕ್ಷಸಾಗ್ರಣಿಯೆ! ಲಂಕಾ ನಿವಾಸಿಗಳಲ್ಲಿ ನಿನ್ನಂತಹ ಗುಣಶಾಲಿಗಳಿಲ್ಲ. ಭಕ್ತರಲ್ಲಿ ಸದ್ಭಕ್ತನಾಗಿ. ಯುದ್ಧದಲ್ಲಿ ಅತಿ ಕುಶಲನಾಗಿ, ರಾಕ್ಷಸರಲ್ಲಿ ಅದ್ವಿತೀಯ ಬಲಶಾಲಿಯಾಗಿರುವೆ. ಇದು ಪ್ರಶಂಸನೆಯ ಕಪಟೋಕ್ತಿಯೆಂದೆಣಿಸಬೇಡ. ಅಸುರಾರಿಯಾದ ಶ್ರೀರಾಮನ ಆಣೆಯಾಗಿ ಹೇಳುತ್ತೇನೆ. ರಾಕ್ಷಸರಲ್ಲಿ ನೀನೊಬ್ಬ ಅಸಮಾನ ಭಕ್ತಾಗ್ರಣಿಯೇ ಹೌದು.

ಅತಿ:- ಈ ಮಾತು ಸತ್ಯವಿರಬಹುದು. ಆದರೆ ಮರದ ಗೊಂಬೆಯಾಗಲಿ, ಕಲ್ಲುಗುಂಡಾಗಲಿ ದೇವರೆಂಬ ಸದ್ಭಾವನೆಯಿಂದ ಪೂಜಿಸಿದರೆ ಪ್ರಸಾದವುಂಟಾಗುವುದು. ನಾನೀಗ ತಮ್ಮನ್ನು ದೇವರೆಂದು ಪೂಜಿಸಿದ ಮೇಲೆ ಸನ್ನಿಧಾನದಿಂದ ಯಾವ ಪ್ರಸಾದವೂ ದೊರಕಲಿಲ್ಲವಲ್ಲಾ!

ಎಂದಾ ದಶರಥಸುತನು । ಶರ-ವೃಂದದಿ ಮುಸುಕಲಸುರನೂ । ಒಂದು ನಿಮಿಷ ಮೂರ್ಛೆಯೊಳು । ಮೈ-ನೊಂದೊರಗಿದ ನಾಚಿಕೆಯೊಳು ||೫||

ಲಕ್ಷ್ಮಣ:- ಭಕ್ತಾಗ್ರಣಿಯೆ! ಉಪಾಸಕರು ಯಾವರೀತಿಯಿಂದ ಪೂಜಿಸುವರೊ ತತ್ಪ್ರೀತಿ ಪ್ರಸಾದವಾಗುವುದಿದೆ. ಅಂತೆಯೆ ಸರಳುಗಳ

ಪೂಜೆಗೆ ಸರಳಿನ ಪ್ರಸಾದವನ್ನೇ ಅನುಗ್ರಹಿಸುತ್ತೇನೆ. ಪರಿಗ್ರಹಿಸು!

ಅತಿ:- ಏನಿದು? ಮಳೆಗಾಲದ ಜಡಿಮಳೆಯಂತೆ ಸರಳುಗಳ ಮಳೆಯೇ ಕವಿದು ಬರುತ್ತಿದೆ ಏನು ಮಾಡಲಿ?

॥ ಕಂದ ಪದ್ಯ ॥

ಬಳಿಕಂ ಮೈಮುರಿದೆದ್ದು । ಖಳಕುಲತಿಲಕಂ ಉದಾತ್ತ ದೃಢಚಿತ್ತದೊಳಂ ॥ ಜಲರುಹನಾಭನ ಪದಯುಗ । ನಳಿನವನೆನೆವುತ್ತಲೊಯ್ಯನೆಂದನು ತನ್ನೊಳ್ ॥೧॥

ಅತಿ:- (ಸ್ವ) ಶ್ರೀರಾಮ! ದಶರಥಾತ್ಮಜ ರಾಮಾ! ಸೀತಾಪತೇ! ಏನದ್ಭುತವಿದು? ಇದಿರಾದ ವೀರನು ಪ್ರಸಾದರೂಪವಾಗಿ ಬಿಟ್ಟ ಬಾಣಜಾತಗಳ ಪ್ರಭಾವವೇ! ದೇವರು ಕೊಟ್ಟ ಪ್ರಸಾದವನ್ನು ಇನ್ನಾವಂಗದಲ್ಲಿಯೂ ಧರಿಸಬಾರದೆಂದು "ಸರ್ವಸ್ಯ ಗಾತ್ರಸ್ಯ ಶಿರಃ ಪ್ರಧಾನಂ" ಎಂಬಂತೆ ತಲೆಯನ್ನೊಡ್ಡಿದೆ ತಲೆಯೇ ಭಾರವಾಯಿತು. ಅಂಗಾಂಗಳು ನಿತ್ರಾಣಗೊಂಡುವು. ಇಂದ್ರಿಯಗಳ ಶಕ್ತಿಯೇ ಇಲ್ಲದಂತಾಗಿ ಮೈಮರೆತುಹೋದೆನು. ಓ ಚೈತನ್ಯಮೂರ್ತಿಯೇ! ನಿನ್ನ ಲೀಲಾ ವಿಭೂತಿಯನ್ನು ಏನೆಂದು ವರ್ಣಿಸಲಿ?

ರಾಗ—ಕಾಂಭೋದಿ । ಝಂಪೆ—ತಾಳ

ನರಗಿಗೀ ಬಲುಹೆಲ್ಲಿ ಇಹುದು ವಾನರಗೀ ॥ ಪರಿಯ ಕಡುಹೆಲ್ಲಿ ಬಂದಪುದು ॥ ಹರಿಯ ಮಾಯಾವಿಲಾಸವಿದಲ್ಲದೊಂದಿಲ್ಲ । ಮರೆಯ ಮಾತೇನುದಿಟವೈಸೆ ॥೧॥

ಅತಿ:- (ಸ್ವ) ರಮಣೀಯವಾದ ರಾಮಾಭಿಧಾನದಿಂದಿರುವ ಸೀತಾರಾಮನು ನಿಜಕ್ಕೂ ಮಾನವನಲ್ಲ ಸರ್ವಜ್ಞನಾಗಿ, ಸರ್ವಶಕ್ತನಾಗಿ, ಸರ್ವೇಶ್ವರನಾಗಿ, ಸರ್ವಗತನಾಗಿ, ಸರ್ವಾಂತರ್ಯಾಮಿಯಾಗಿರುವ ಮಹಾವಿಷ್ಣುವೆ! ಆತನ ಅಮಾನುಷ ಪ್ರಭಾವದ ಪ್ರತಿಯೊಂದು ಪ್ರಕರಣವನ್ನು ಪರಿಶೀಲಿಸಿದರೆ ಪರಮಾಶ್ಚರ್ಯವಿದೆ. ಏಕೆಂದರೆ ನವ ತಾರುಣ್ಯದಲ್ಲಿ ಸಾವಿರಾನೆಯ ಬಲವುಳ್ಳ ತಾಟಕಿಯನ್ನು ಮಣ್ಣುಗೂಡಿಸಿದನು. ಮಾಯಾಮೃಗ ಮಾರೀಚನ ಕೊರಳ ಮೇಲೆ ಸರಳನ್ನೂರಿ ಗೋಳುಗುಡಿಸಿದನು. ಯಾರಿಂದಲೂ ಎತ್ತಲಾಗದ ಶಿವಧನುಸ್ಸನ್ನು ನಿಮಿಷಮಾತ್ರದಿಂದೆತ್ತಿದನು. ಮಹಾ ಬಲಶಾಲಿಯಾದ ವಾಲಿಯನ್ನು ಒಂದೇ ನಿಮಿಷದಲ್ಲಿ ಕೆಡಹಾಕಿದನು. ಹೆಚ್ಚೇಕೆ? ವನೌಕಸರನ್ನು ಸೇನಾನಿಗಳನ್ನಾಗಿ ಏರ್ಪಡಿಸಿಕೊಂಡು ಹರಬ್ರಹ್ಮಾದಿಗಳ ವರಬಲೋ

ತ್ಕಾರದಿಂದ ಬಲಾಢ್ಯರಾದ ಎಷ್ಟೋ ರಾಕ್ಷಸವೀರರನ್ನು ಕೊಂದು, ಕರ್ಬುರಾನ್ವಯವನ್ನೇ ಕಿತ್ತಿಕ್ಕಲು ಸಾಧಿಸುತ್ತಿರುವನು ಇದನ್ನೆಲ್ಲಾ ವಿಮರ್ಶಿಸುವಾಗ ನರನೆಂದು ಹೇಳುವವರಾರು? ಹಾಗೆ ರಾಕ್ಷಸರಿಂದಳಿದು ಪುನಃ ಜೀವಗೊಂಡು ಕೊಳುಗುಳಕ್ಕೆ ನಿಲ್ಲುವ ಕೋತಿಗಳಾದರೂ ಸಾಮಾನ್ಯ ಕೋತಿಗಳಂತಿರುವರೆ? ಇಲ್ಲ ಇಲ್ಲ. ಇಂದ್ರಾಗ್ನಿ. ಯಮವರುಣ, ವಾಯುಕುಬೇರರೇ ಮೊದಲಾದ ದೇವತೆಗಳ ಮಕ್ಕಳಾಗಿರುವರು. ಇಂತಹ ಅತ್ಯಾಶ್ಚರ್ಯಕರವಾದ ಘಟನೆಗಳೆಲ್ಲ ಶ್ರೀಹರಿಯ ಮಾಯೂವಿಲಾಸವೇ ನಿಜ

ಆಯಿತಕಟಾ! ತಂದೆಗಾಯುಷ್ಯ ಕಡೆಯಿನ್ನು । ಬಾಯೊಳೇಕೆ ನಾನಿದಕೆ ‼ ಕಾಯವಿದ್ದಾಗ ನಾರಾಯಣನ ಪದವನ್ನು । ಪ್ರೀಯದಿಂ ಭಜಿಸಬೇಕೆಂದ ‼೨‼

ಅತಿ:- (ಸ್ವ) ಸಕಲವೂ ಕಾಲಾಧೀನ. ಲೋಕದ ಉನ್ನತಿ, ಅವನತಿ, ಸಂಯೋಗ-ವಿಯೋಗ, ಜನನ ಮರಣ, ಎಲ್ಲಕ್ಕೂ ಕಾಲವೇ ಮುಖ್ಯ ಕಾರಣ. ಅಲ್ಲವಾದರೆ ನನ್ನ ದಿವ್ಯ ರಥ, ಅಭೇದ್ಯವಾದ ಕವಚ, ಮಹೋನ್ನತವಾದ ಕೋದಂಡ, ಅಮೋಘಾಸ್ತ್ರಗಳೆಲ್ಲ ವ್ಯರ್ಥವಾಗಿ, ನಿಶ್ಶಕ್ತನಾಗಿ ವ್ಯೈಮರೆತು ಹೋಗಲು ಏನು ಕಾರಣ? ಇನ್ನು ನನ್ನ ಶೀರ್ಘರೂಪರ ಪಾಡೇನು? ಯಾವ ಐಶ್ವರ್ಯವಿರಲಿ, ಈರೇಳು ಲೋಕಗಳ ಪಾರುಪತ್ಯವಿರಲಿ, ಬ್ರಹ್ಮನಿಂದ ಪಡೆದ ಪರಮಾಯುಷ್ಯವಿರಲಿ, ಎಲ್ಲವೂ ಈ ಕಾಲಕ್ಕೆ ಅಂತ್ಯವಾಯಿತೆನ್ನಬೇಕು ಏಕೆಂದರೆ ವನ್ಯಪ್ರಾಣಿಗಳಾದ ಕಪಿಕರಡಿಗಳು ಜಪತಪೋನುಷ್ಠಾನಗಳಿಂದಿದ್ದು ಚತುರ್ಬಲದಂತೆ ವ್ಯೂಹಕಟ್ಟಿಕೊಂಡು ಯುದ್ಧನೀತಿಯಲ್ಲಿ ಕುಶಲರಾಗುತ್ತಿದ್ದಿಲ್ಲ. ರಾಮ ಲಕ್ಷ್ಮಣರಾದರೋ ಮನುಷ್ಯರಾಗಿದ್ದಲ್ಲಿ ಕುಂಭಕರ್ಣಾದಿ ಮಹಾರಾಕ್ಷಸರನ್ನು ನಿರ್ನಾಮಗೊಳಿಸುವಷ್ಟು ಸಮರ್ಥರಾಗುತ್ತಿದ್ದಿಲ್ಲ. ಇದೆಲ್ಲ ಶ್ರೀಹರಿಯ ನರನಾಟಕವೇ ಸರಿ. ಭೂಭಾರ ಹರಣಕ್ಕಾಗಿ, ನ್ಯಾಯಧರ್ಮಗಳ ಸಂಸ್ಥಾಪನೆಗಾಗಿ, ಮಹಾ ವಿಷ್ಣುವು ರಾಮನಾಗಿಯೂ ಲಕ್ಷ್ಮಿಯು ಸೀತಾ ದೇವಿಯಾಗಿಯೂ ಮಹಾಶೇಷನು ಲಕ್ಷ್ಮಣನಾಗಿಯೂ ಜನ್ಮವೆತ್ತಿರುವುದು ನಿಶ್ಚಯ ಆದ್ದರಿಂದ ನಮ್ಮಯ್ಯನ ಆಯುಷ್ಯವು ಇಲ್ಲಿಗಾಯಿತು. ಮಹೇಶನಿಂದೈದು, ಬ್ರಹ್ಮನಿಂದ ನಾಲ್ಕು, ನಿಕುಂಭಿಳೆಯಿಂದೊಂದು ಹೀಗೆ ದಶಕಿರೀಟಗಳನ್ನು ಹೊತ್ತು ಕೈಯಲ್ಲಿ ಚಂದ್ರಹಾಸವನ್ನಾಂತು, ಮೆರೆದಾಡಿದ ಸಾರ್ವಭೌಮತ್ವವು ಅಂತ್ಯವಾಯಿತು. ಯಾರಿಂದಲೂ ಮರಣ

ವಿಲ್ಲದಂತಹ ವರಪಡೆದಿದ್ದರೂ ಮಾನವರ ಹೆಸರೆತ್ತದ ಕಾರಣ ಮನುಷ್ಯಾವ ತಾರವೆತ್ತಿದ ಶ್ರೀರಾಮನಿಂದ ಬೇಗನೆ ಸಾಯುವುದು ಖಂಡಿತ. ಅದಕ್ಕಾಗಿ ನಾನೆಷ್ಟು ಹೋರಾಡಿದರೂ ಎದೆಗೆಟ್ಟು ಬಾಯ್ಬಿಟ್ಟು ಗೋಳಾಡಿದರೂ ಫಲ ವಿಲ್ಲ. ಪಂಚ ಭೂತಾತ್ಮಕ ಕಾಯವಿರುವಾಗಲೇ ನಾರಾಯಣನ ಪಾದಾಬ್ಜ ವನ್ನು ಭಜಿಸಿ ಮುಕ್ತನಾಗುವುದು ಶ್ರೇಯಸ್ಕರವಲ್ಲವೇ!

ಎಂದು ಹೃತ್ಕಮಲ ಕರ್ಣಿಕೆಯ ಮಧ್ಯದಲಿ ರಘು । ನಂದನನ ಚಾರು ಮೂರ್ತಿಯನು ॥ ಚಂದದಿಂದಿರಿಸಿ ನಾಲಿಗೆ ಕೊನೆಯೊಳೊಡನೆ ಜಯ । ವೆಂದು ಸ್ತುತಿಗೈದನಚ್ಯುತನ ॥೩॥

ಅತಿ:- (ಸ್ವ) ಇನ್ನು ಕಾಲಯಾಪನೆಯು ನಿಷ್ಫಲ. ರಘುರಾಮ ಸ್ವಾಮಿಯ ಮಂಗಲಮಯ ದಿವ್ಯಮೂರ್ತಿಯನ್ನು ಹೃತ್ಕಮಲದ ಕರ್ಣಿಕೆ ಯ ಮಧ್ಯದಲ್ಲಿ ಸ್ಥಾಪಿಸಿ, ಭಕ್ತಿಯೆಂಬ ಜ್ಯೋತಿಯನ್ನು ಶ್ರದ್ಧೆಯೆಂಬ ತೈಲ ದಲ್ಲಿ ಹಚ್ಚಿ, ಸುಕೃತವೆಂಬ ಫಲನೈವೇದ್ಯಮಾಡಿ, ಪುನರ್ಜನ್ಮವಿಲ್ಲದೆ ಮುಕ್ತಿ ಹೊಂದುವ ಹಾಗೆ ಪ್ರಾರ್ಥಿಸಿಕೊಳ್ಳುತ್ತೇನೆ. ಇದರಿಂದ ಕಬ್ಬಿಣವು ರಸದಲ್ಲ ದ್ದಿದರೆ ಮರಳಿ ಕಬ್ಬಿಣವಾಗದ ಹಾಗೆ, ಪರಮಾತ್ಮನ ಹಸ್ತದಲ್ಲಿರುವ ದಿವ್ಯಾ ಸ್ತ್ರದಿಂದಳಿದರೆ ಭವಭವಾಂತರದ ಬಾಧೆಯು ದೂರವಾಗಿ ಪರಗತಿಯು ಲಭ್ಯವಾಗುವುದು ನಿಶ್ಚಯ. ಜಯ ಜಯ! ಜನಕಜಾರಮಣ! ಶರಣಜನೋ ಧರಣ! ಜನ್ಮಾಮಯ ತಾಪನಿವಾರಣ! ಜಗತ್ಪತೇ ಶ್ರೀರಾಮ! ನಮೋನ ಮಃ ಇದೇನು ಶ್ರೀರಾಮನ ವಿರಾಡ್ರೂಪವು ನನ್ನ ನಿರ್ಮಲ ಮನೋದೃಷ್ಟಿ ಗೆ ಪ್ರತ್ಯಕ್ಷವಾದಂತಿದೆ. ಆಹಾ ಏನು ಸುಂದರ ವಿಗ್ರಹವಿದು! ಆನಂದಮಯ ಸತ್ಯಸ್ವರೂಪವೇ ಕಾಣುವಂತಾಯಿತು. ನಿಜವಾಗಿಯೂ ಅತಿಕಾಯನ ಜನ್ಮ ಇಂದಿಗೆ ಸಫಲವಾಯಿತೆನ್ನಬೇಕು

॥ ಕಂದ ಪದ್ಯ ॥

ಇಂತತಿಕಾಯಂ ಮಿಗೆಹೃದ । ಯಾಂತರದೊಳಿಂತು ರಾಮನಂ ಧ್ಯಾನಿ ಸುತಾ ॥ ಮುಂತಿಹ ಲಕ್ಷ್ಮಣದೇವನೊ । ಳಂತವೆ ಸಂತಸದೊಳೊರೆದನತಿ ಘರ್ಜಿಸುತಂ ॥೧॥

ಅತಿ:- (ಸ್ವ) ಮನವೆಂಬ ಕಡಲಲ್ಲಿ ಆಶಾತರಂಗಗಳು ಏಳುತ್ತಾ ಬೀಳುತ್ತಾ ಇವೆ. ಈಗ ನೋಡಿದರೆ ಅವೆಲ್ಲ ಮಾಯವಾಗಿ ಪರಿಶುದ್ಧವಾದ ಮನಸ್ಸಿಗೆ ಹೃದಯಾಬ್ಜದಲ್ಲಿರುವ ಶ್ರೀ ರಾಮನ ದಿವ್ಯ ಸ್ವರೂಪವೇ ಕಾಣು

ವಂತಾಯಿತು. ಇದೇನಾಶ್ಚರ್ಯ! ಸುತ್ತಲೂ ಕಣ್ತೆರೆದು ನಿರೀಕ್ಷಿಸಿದಾಗ ಪ್ರಕಾಶಮಯವಾದ ಮಹಾಸ್ವರೂಪವೊಂದು ಪ್ರತ್ಯಕ್ಷವಾದಂತೆ ಭಾಸವಾಗುತ್ತಲಿದೆ. ಸಾವಿರ ಕೈಗಳಲ್ಲಿ ಸಾವಿರ ಆಯುಧಗಳನ್ನು ಹಿಡಿದು ನಿಂತಿರುವ ಶೇಷಾವತಾರಿಯೇ ಇರಬೇಕು. ಓಹೋ ತಿಳಿಯಿತು. ಸ್ಪಷ್ಟವಾಗಿ ತಿಳಿಯಿತು. ಇನ್ನಾವ ಚಿಂತನೆಯೂ ಇಲ್ಲ ಇದ್ದರೆ ಖಾಡಾಖಾಡಿ ಹೊಯ್ದಾಡಿ ಆತ್ಮಾರ್ಪಣವಮಾಡುವುದೊಂದೇ ಉಳಿದಿದೆ.

ರಾಗ ಸೌರಾಷ್ಟ್ರ । ತ್ರಿವುಡೆ—ತಾಳ

ತಡವಿದೇತಕೆ ವೀರ ಬೇಗನೆ । ತೊಡು ಮಹಾಬ್ರಹ್ಮಾಸ್ತ್ರವನು ಜಗ । ದೊಡೆಯ ರಾಮನ ಪದವ ಸೇರುವೆ । ದೃಢದೊಳಂದು ॥೧॥

ಅತಿ:- ವೀರಧೀರೋದ್ಧಾರನೇ! ಇನ್ನು ವಿಳಂಬಿಸುವುದು ಬೇಡ. ಬ್ರಹ್ಮಕುಲೋದ್ಭವನಾದ ನನಗೆ ಈ ಲೋಕದಲ್ಲಿ ಬದುಕಬೇಕೆಂಬಾಶೆ ಲೇಶವಾದರೂ ಇಲ್ಲ. ಪರಬ್ರಹ್ಮಸ್ವರೂಪಿಯಾದ ಶ್ರೀರಾಮ ಸ್ವಾಮಿಯ ಪಾದಕ್ಕೆ ನನ್ನೀ ಪ್ರಾಣವನ್ನು ಕಾಣಿಕೆಯಾಗಿ ಅರ್ಪಿಸಲಿರುತ್ತೇನೆ. ಕೂಡಲೇ ನನ್ನ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಲು ಸಿದ್ಧನಾಗು. ಸಂದೇಹವಿದೆಯೇ?

ಲಕ್ಷ್ಮಣ:- ಅತಿಕಾಯನೇ! ಹೀಗೇಕೆನ್ನುವೆ?

ಎಂದು ಬೊಬ್ಬಿರಿದಾ ದಶಾನನ । ನಂದನನು ತೆಗೆದೆಚ್ಚನಮರರ । ವೃಂದಕಂಪಿಸಲಾ ಸುಮಿತ್ರೆಯ । ಕಂದಗಂದು ॥೨॥

ಅತಿ:- (ಸ) ಬ್ರಹ್ಮಶರವನ್ನುಪಯೋಗಿಸಲೂ ಉಪಸಂಹರಿಸಲೂ ಜಿತೇಂದ್ರಿಯನಿರಬೇಕು ಈದೃಷ್ಟಿಯಿಂದ ಪ್ರತಿಸ್ಪರ್ಧಿಯು ಸಂದೇಹಪಡಬಹುದು. ಆದ್ದರಿಂದ ಬ್ರಹ್ಮಕುಲೋತ್ಪನ್ನನಾದ ನಾನೇ ಮೊದಲಾಗಿ ಪ್ರಯೋಗಿಸಿಬಿಡುತ್ತೇನೆ. ಇವಿರಾಳಿಯೇ ಇದೋ ನಾನು ಬಿಡುವ ಬ್ರಹ್ಮಶರವನ್ನು ಶಕ್ತಿ ಇದ್ದರೆ ಕತ್ತರಿಸಬಹುದು. ಇಲ್ಲವಾದರೆ ಪ್ರಾಣಕೊಡಬೇಕಾದೀತು ಬಲ್ಲೆಯಾ!

ಮನದಿ ರಾಮನ ನೆನೆದು ಬಾರಿಯ । ಧನುವಿಗಾ ಬಾಣವನು ಹವಣಿಸಿ । ತೊನೆದು ಕಿವಿವರೆಗೆಳೆದು ಬಿಟ್ಟನು । ಕನಲುತಂದು ॥೩॥

ಲಕ್ಷ್ಮಣ:- (ಸ್ವ) ಅತಿಕಾಯನು ಬಿಟ್ಟ ದಿವ್ಯಾಸ್ತ್ರವು ಭೂವ್ಯೋಮಗಳೇ ಕಂಪಿಸುವಂತೆ ಪ್ರಳಯಾಗ್ನಿಯ ಹಾಗೆ ಜಾಜ್ವಲ್ಯಮಾನವಾಗಿ ಉರಿಯುತ್ತಾ ಬರುತ್ತಿದೆ. ತತ್ಕ್ಷಣವೇ ಕತ್ತರಿಸದಿದ್ದರೆ ಇಡೀ ಜಗತ್ತಿಗೆ ಅಪಾ

ಯುತಪ್ಪಿದ್ದಲ್ಲ. ಅದಕ್ಕಾಗಿ ವಾಯುದೇವನ ಸೂಚನೆಯಂತೆ ರಾಮಧ್ಯಾನದಿಂದ ಧೈರ್ಯತಂದುಕೊಂಡು ಬ್ರಹ್ಮಶರವನ್ನೇ ಪ್ರತಿಯಾಗಿ ಪ್ರಯೋಗಿಸುತ್ತೇನೆ. ಶ್ರೀರಾಮನೆ! ಈ ದಿವ್ಯ ಬ್ರಹ್ಮಾಸ್ತ್ರದ ಹತಿಯಿಂದ ವಿರೋಧಿಯೂ ವಿರೋಧಿಯ ಬ್ರಹ್ಮಾಸ್ತ್ರವೂ ಕತ್ತರಿಸಲ್ಪಟ್ಟು ನಮ್ಮ ಪಕ್ಷಕ್ಕೆ ವಿಜಯವಾಗುವಂತೆ ಅನುಗ್ರಹಿಸಬೇಕು ದೇವಾ!

ಕಿಡಿಯನುಗುಳುತಲಾ ಮಹಾಸ್ತ್ರವು । ತಡೆಯದೈತಂದಾ ನಿಶಾಟನ । ಕುಡುಕಿ ಕೊರಳನು ಕಚ್ಚಿ ಬಾಂದಳ । ಕಡರಿತೊಡನೆ ॥೪॥

ಲಕ್ಷ್ಮಣ:- ಅತಿಕಾಯನೇ! ಇದೇ ನಿನ್ನ ಕಡೆಗಾಲ. ಇಷ್ಟದೇವತೆಯಿದ್ದರೆ ಈಗಲೆ ಸ್ಮರಿಸಿಕೊ! ನೀನು ಬಿಟ್ಟಸ್ತ್ರವನ್ನು ಖಂಡಿಸಿ ನಿನ್ನ ಕಂಠವು ತುಂಡಾಗಿ ಬೀಳುವಂತೆ ದಿವ್ಯವಾದ ಬ್ರಹ್ಮಾಸ್ತ್ರವನ್ನು ಕೋದಂಡಕ್ಕೆ ಪೋಣಿಸಿ ಅಭಿಮಂತ್ರಪೂರ್ವಕ ಪ್ರಯೋಗಿಸುತಿದ್ದೇನೆ ಜಿತೇಂದ್ರಿಯತ್ವದ ಶಕ್ತಿಸಾಮರ್ಥ್ಯಗಳಿದ್ದರೆ ಇದಿರಾಗುವವನಾಗು!

ಅತಿ:- (ಸ್ವ) ಹರಿನಾರಾಯಣ. ಲಕ್ಷ್ಮೀಪತೇ ಸೀತಾಕಾಂತ. ಜಯಜಯ! ರಕ್ಷಿಸು.

॥ ಭಾಮಿನಿ ॥

ಅರಸಿ ಕೇಳ್ಬಳಿಕಾ ನಿಶಾಟನ । ಶಿರವು ಧರೆಯಲಿ ಬೀಳೆ ಕಂಡದ । ನೆರಡು ಕೈಯಿಂದೆತ್ತಿ ಮುದ್ದಿಸುತಲೆ ವಿಭೀಷಣನು ॥

ರಾಮ:- (ಸ್ವ) ಸೂರ್ಯಬಿಂಬವೇ ಉರುಳಿಬಿದ್ದಂತೆ ಅತಿಕಾಯನ ಶಿರವು ನನ್ನೀ ಚರಣಾಗ್ರದಲ್ಲಿ ಬಿದ್ದಿರುವುದು. ಆಹಾ! ಏನು ಸುಂದರ ನಗುಮುಖವಿದು. ನೋಡುತಿದ್ದಂತೆಯೇ ಸುಷುಮ್ನಾನಾಡಿಯಿಂದ ಬ್ರಹ್ಮರಂಧ್ರಕ್ಕೇರಿದ ಅತಿಕಾಯನ ಆತ್ಮಜ್ಯೋತಿಯು ಪ್ರಕಾಶಮಾನವಾಗಿ ಬಂದು ನನ್ನೀ ಹೃದಯಾಕಾಶದಲ್ಲಿ ವಿಲೀನವಾಗಿ ಬಿಟ್ಟಿತು. ಅತಿಕಾಯ ಏನು ಧನ್ಯನೋ! ರಾಕ್ಷಸಕುಲದಲ್ಲಿ ಜನ್ಮವೆತ್ತಿದರೂ ಮಹಾಧನ್ಯನೇ ನಿಜ.

ವಿಭೀಷಣ:- (ಸ್ವ) ಹರಹರಾ! ಅತಿಕಾಯನ ರುಂಡವು ಅಂತರಿಕ್ಷದಿಂದಿಳಿದು ರಣಾಂಗಣದಲ್ಲಿ ಬಿದ್ದಿರುವುದಲ್ಲಾ! ಅಯ್ಯೋ ಅತಿಕಾಯನೇ! ಮಡಿದುಹೋದೆಯಾ?

ತರಳ ಹಾಸುಕುಮಾರ ಸದ್ಗುಣ ಶರಧಿಯೇ ಹಾಯೆನುತ ಕಂಬನಿ। ಗರೆದು ಮುಮ್ಮಲ ಮರುಗಿದನು ಘನತರದ ದುಃಖದಲಿ ॥೧॥

ವಿಭೀಷಣ:- (ಸ್ವ) ಹಾ ಮಗನೆ! ನಿನ್ನ ಮುದ್ದು ಮುಖವನ್ನು ಕೈಯಿಂದೆತ್ತಿ ಮುದ್ದಾಡುವ ಭಾಗ್ಯವಿನ್ನಿಲ್ಲವಾಯಿತೆ? ಕುಮಾರ! ಗುಣಗಣದಲ್ಲಿ ಸಮುದ್ರದಂತೆ, ಭಕ್ತರಲ್ಲಿ ಶಿರೋರತ್ನದಂತೆ, ಕ್ಷಮೆಯಲ್ಲಿ ಹೇಮಾದ್ರಿಯಂತೆ ಮೆರೆದಾಡಿದ ವೀರಾಧಿವೀರನೇ! ಶ್ರೀರಾಮನ ಪರಮ ಭಕ್ತನಾಗಿದ್ದು ವೈಷ್ಣವಶಿರೋಮಣಿಯಾಗಿ ಸಮರಾಂಗಣದಲ್ಲಿ ಮರಣವನ್ನೈದಿದೆಯಾ? ಹಾ! ಕಾಲಾವಸ್ಥೆಯೇ!

ಇಂತು ದುಃಖಿಸುವಾ ವಿಭೀಷಣ। ನಂತರಂಗವ ತಿಳಿದು ಬಳಿದೇ। ಭ್ರಾಂತಿಯೇಕೈ ಹುಟ್ಟಿದವರಿಗೆ ಮರಣತಪ್ಪುವುದೇ ॥ ಚಿಂತಿಪಿದೊಡೇನ ಹುದು ಜಗದಾ। ದ್ಯಂತವೆಲ್ಲವು ಕಾಲವಶವದ। ನೆಂತು ನಿರ್ಮಿಲು ಒಹುದೆನುತ್ತೊಡಬಡಿಸಿದನು ರಾಮ ॥೧॥

ಲಕ್ಷ್ಮಣ:- ವಿಭೀಷಣಾ! ವೃಥಾ ಕಣ್ಣೀರುದಂಬಿ ಗೋಳಾಡಬಾರದು "ಜಾತಸ್ಯ ಮರಣಂ ಧ್ರುವಂ" ಎಂಬುದು ಸತ್ಯವಿರುವಾಗ ಸಾಯದೇ ಉಳಿದವರಾರು? ಈ ಪ್ರಪಂಚದಲ್ಲಿ ಬುದ್ಬುದಾವಳಿಯಂತೆ ಹೊಂದಿಕೊಂಡಿರುವ ಹೆಂಡಿರುಮಕ್ಕಳು, ಅಣ್ಣತಮ್ಮಂದಿರು, ಬಂಧುಬಳಗವೆಲ್ಲವೂ ಋಣಾನುಬಂಧವಲ್ಲವೇ? ಹೀಗಿರುವಾಗ ಈ ಹುಚ್ಚಾಟವೇಕೆ? ಬಾ ಹೋಗೋಣ ರಾಮಚಂದ್ರನಲ್ಲಿಗೆ.

ರಾಮ:- ಶರಣಶ್ರೇಷ್ಠನೇ! ಇದೇನು ವಿಭ್ರಮೆ. ಎಲ್ಲವೂ ಕಾಲವಶವಿರುವಾಗ ಮಿಂಚಿದ ಕಾರ್ಯಕ್ಕಾಗಿ ಸಂತಾಪಪಟ್ಟು ಕಣ್ಣೀರುಸುರಿಸುವುದೇ? ಈದಿನದ ಮಹಾಹವದಲ್ಲಿ ನಾನೇ ಜೈಸಿರುವಾಗ ನೀನೇಕೆ ಮರುಗುತ್ತೀ! ಅಜ್ಞಾನಜನ್ಯವಾದ ಮೋಹಾಂಧಕಾರವನ್ನು ಸುಜ್ಞಾನ ಜ್ಯೋತಿಯಿಂದ ಓಡಿಸಬೇಕಲ್ಲದೆ ಅಳಿದವರಿಗಾಗಿ ಅಳುವುದೇತಕೆ? ನಾನು, ನನ್ನದು, ನಮ್ಮದು, ನಮ್ಮವರೆಂಬ ಬಯಲಭ್ರಾಂತಿಯಿಂದ ಮನಕರಗುವುದು ಪ್ರಾಜ್ಞರಾದವರ ಮತವಲ್ಲವಷ್ಟೆ! ಆದ್ದರಿಂದ ಯಾವ ಆಗುಹೋಗುಗಳಿಗೂ ವ್ಯಸನಪಡದೆ ಮುಂದೇನಾಗುವುದೋ ನಿರೀಕ್ಷಿಸೋಣ. ದೈವದಿಚ್ಛೆಯೇನಿರುವುದೋ ನಿರೀಕ್ಷಿಸೋಣ!

ವಿಭೀಷಣ:- ದೇವಾದಿ ದೇವನೇ! ಅನುಗ್ರಹೀತನಾದೆನು.

ಮಂಗಲ ಮಹಾ ಶ್ರೀ! ಶ್ರೀ! ಶ್ರೀ!

— ಶುಭಂ ಭೂಯಾತ್ —

— ನಮ್ಮ ಪ್ರಕಟಣೆಗಳು —

೧	ಗೀತಾ ಸಾಂಗತ್ಯ	1-50
೨	ತದ್ಭವ ಸಂಸ್ಕೃತ ಶಬ್ದ ಕೋಶ	0-50
೩	ಶ್ರೀ ದೇವೀ ಭಕ್ತಿ ಸಾರ (ಭಾಮಿನೀ ಷಟ್ಪದಿ)	0-25
೪	ದಾನವೀರ ಕರ್ಣ (ಯಕ್ಷಗಾನ)	0-50
೫	ಅಶೋಕ ಸುಂದರೀ ಪರಿಣಯ (ಯಕ್ಷಗಾನ)	0-75
೬	ತ್ರಿಪುರ ಮಥನ (ಯಕ್ಷಗಾನ)	0-25
೭	ಮಧುಪುರ ಮಹಾತ್ಮೆ (,,)	0-32
೮	ಶ್ರೀ ಗಣೇಶ ಮಹಾತ್ಮೆ (,,)	0-25
೯	ಶ್ರೀ ವಿಷ್ಣುಲೀಲೆ (,,)	0-35
೧೦	ಶ್ರೀ ರಾಮ ಪಟ್ಟಾಭಿಷೇಕ (ಯಕ್ಷಗಾನ)	1-00
೧೧	ರತಿ ಕಲ್ಯಾಣ—ಅರ್ಥಸಹಿತ (,,)	1-25
೧೨	ಸುಧನ್ವ ಕಾಳಗ ,, (,,)	1-00
೧೩	ದಾಸರ ಪದಗಳು (ಭಜನೆ)	0-40
೧೪	ಶ್ರೀ ಶಿವಾನಂದ ಕೀರ್ತನತರಂಗ (ಭಜನೆ)	0-40
೧೫	ಶ್ರೀ ಕೃಷ್ಣಾನಂದ ಕೀರ್ತನತರಂಗ (,,)	0-40
೧೬	ಶ್ರೀ ಸತ್ಯಸಾಯಿ ಕೀರ್ತನತರಂಗ (,,)	0-25
೧೭	ಶ್ರೀ ರಾಮ ಭಜನೆ	0-30
೧೮	ಕಂದನ ಕೊಳಲು (ಶಿಶುಗೀತೆ)	0-37
೧೯	ಶ್ರೀ ಹರಿಭಜನೆ	0-25
೨೦	ಶ್ರೀ ದೇವೀಭಜನೆ	0-60
೨೧	ಸಂಜ್ಞಾರ್ಥ ತತ್ವಕೋಶ (ಪುನರ್ಮುದ್ರಣ) ಅಚ್ಚಾಗಲಿದೆ.	

ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯುತ್ತವೆ.